ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಮೇ 31, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 17 RNI : 27369/75

ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

ಅಂಗನವಾಡಿಗಳು ಪುನರಾರಂಭ

ಹರಿಹರ, ಮೇ 30 - ತಾಲ್ಲೂಕಿನ ಗ್ರಾಮೀಣ ಪ್ರದೇಶದ 176 ಅಂಗನ ವಾಡಿ ಕೇಂದ್ರಗಳು ಮತ್ತು ನಗರ ಪ್ರದೇಶದ 83 ಅಂಗನ ವಾಡಿ ಕೇಂದ್ರಗಳು ಪುನರಾ ರಂಭಗೊಂಡಿದ್ದು ಮಕ್ಕಳಿಗೆ ಪುಷ್ಪ ಕೊಡುವುದರ ಮೂಲಕ ಸ್ವಾಗತಿಸಿ, ದೈನಂದಿನ ಕಾರ್ಯಚಟು ವಟಿಕೆಗಳನ್ನು ಆರಂಭಿಸ ಲಾಯಿತು ಎಂದು ಸಿಡಿಪಿಓ ಪೂರ್ಣಿಮಾ ತಿಳಿಸಿದರು.

ಬೇಸಿಗೆ ರಜೆ ದಿನಗಳ ಕಾಲ ಮುಗಿದಿದ್ದರಿಂದ, ಇಂದಿನಿಂದ ತಾಲ್ಲೂಕಿನ ಎಲ್ಲಾ ಅಂಗನವಾಡಿ ಕೇಂದ್ರದಲ್ಲಿ ಕೆಲಸ ಕಾರ್ಯಗಳು ಎಂದಿನಂತೆ ನಡೆಯುತ್ತಿವೆ. ಇಂದು ಶಾಲೆಯಲ್ಲಿ ಶಾರದಾ ಪೂಜೆಯೊಂದಿಗೆ ಮಕ್ಕಳಿಗೆ (3ನೇ ಪುಟಕ್ಕೆ)

ನಾಳೆಯಿಂದ ಬಸ್ ಪ್ರಯಾಣ ಉಚಿತ

ಸಾಮಾನ್ಯ ಸರ್ಕಾರಿ ಬಸ್‌ಗಳಲ್ಲಿ ಮಾತ್ರ ಮಹಿಳೆಯರಿಗೆ ಉಚಿತ ಕೊಡುಗೆ: ಸಾರಿಗೆ ಸಚಿವ

ಬೆಂಗಳೂರು, ಮೇ 30- ಜೂನ್ ಒಂದರಿಂದಲೇ ಎಲ್ಲಾ ವರ್ಗದ ಮಹಿಳೆಯರಿಗೆ ಸರ್ಕಾರದ ಸಾಮಾನ್ಯ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಸೌಲಭ್ಯ ಕಲ್ಪಿಸುವುದಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ತಮ್ಮ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿದ ನಂತರ ಅವರು ಸರ್ಕಾರದ ನಿರ್ಧಾರ ಪ್ರಕಟಿಸಿದ್ದಾರೆ.

ವಿಧಾನಸಭಾ ಚುನಾವಣೆಗೂ ಮುನ್ನ ಪಕ್ಷ ಪ್ರಕಟಿಸಿದಂತೆ ಮಹಿಳೆಯರಿಗೆ ಉಚಿತ ಪ್ರಯಾಣ ಜಾರಿಗೆ ತರಲು ಇಲಾಖೆ ನಿರ್ಧರಿಸಿದೆ. ಜೂನ್ ಒಂದರಂದು ನಡೆಯುವ ಸಂಪುಟ ಸಭೆಯಲ್ಲಿ ಇಲಾಖೆಯ ಕಡತವನ್ನು ಮಂಡಿಸಿ ಮುಖ್ಯಮಂತ್ರಿಗಳ ಅನುಮೋದನೆ ಪಡೆಯಲಾಗುವುದು ಎಂದವರು ಹೇಳಿದರು.

ಕರ್ನಾಟಕದ ಯಾವುದೇ ಮೂಲೆಯಿಂದ ಮತ್ತೊಂದು ಮೂಲೆಗೆ ಮಹಿಳೆಯರು ಉಚಿತವಾಗಿ ಪ್ರಯಾಣಿಸಬಹುದು. ಆದರೆ, ಹವಾನಿಯಂತ್ರಿತ ಸೇರಿದಂತೆ ವೋಲ್ವೋ ಬಸ್‌ಗಳಲ್ಲಿ ಉಚಿತ ಪ್ರಯಾಣವಿಲ್ಲ ಎಂದು ಸ್ಪಷ್ಟಪಡಿಸಿದರು.

ಯೋಜನೆಗೆ 600 ಕೋಟಿ ರೂ. ವೆಚ್ಚವಾಗಲಿದ್ದು, ಈ ಹಣವನ್ನು ಭರಿಸುವಂತೆ ಸರ್ಕಾರವನ್ನು ಕೋರುವುದಾಗಿ ತಿಳಿಸಿದರು.

ಹಣಕಾಸು ಇಲಾಖೆ ಅಪಸ್ವರದ ನಡುವೆಯೂ ಗ್ಯಾರಂಟಿ ಅನುಷ್ಠಾನ

ಬೆಂಗಳೂರು, ಮೇ 30 - ಹಣಕಾಸು ಇಲಾಖೆಯ ವಿರೋಧದ ನಡುವೆಯೂ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರದಲ್ಲಿ ದಿನಗಣನೆ ಆರಂಭವಾಗಿದೆ.

ತಮ್ಮ ಅಡಿಯಲ್ಲಿ ಬರುವ ಇಲಾಖೆಯಿಂದಲೇ ಅಪಸ್ವರ ಬಂದಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅನೌಪಚಾರಿಕ ಮಂತ್ರಿ ಪರಿಷತ್ ಸಭೆ ಕರೆದಿದ್ದಾರೆ.

ಮಂತ್ರಿ ಪರಿಷತ್ ಸಭೆಯಲ್ಲಿ ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದಂತೆ ಸಾಧಕ-ಬಾಧಕಗಳ ಚರ್ಚೆ ನಡೆಸಿ, ಗುರುವಾರ ಜರುಗಲಿರುವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳುತ್ತಾರೆ.

ಜೂನ್ ಒಂದರಿಂದಲೇ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಉದ್ದೇಶದಿಂದ ಐದು ಯೋಜನೆಗಳ ವ್ಯಾಪ್ತಿಗೆ ಬರುವ

ಇಂದು ಅನೌಪಚಾರಿಕ ಮಂತ್ರಿ ಪರಿಷತ್ ಸಭೆ ಕರೆದ ಮುಖ್ಯಮಂತ್ರಿ ಸಿದ್ದರಾಮಯ್ಯ

ಸಚಿವರು, ಇಡೀ ದಿನ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಮಂತ್ರಿ ಪರಿಷತ್ ಮತ್ತು ಮಂತ್ರಿ ಮಂಡಲ ಸಭೆಗೆ ಕರಡು ಸಿದ್ಧಪಡಿಸಿದ್ದಾರೆ.

ಗ್ಯಾರಂಟಿ ಯೋಜನೆಗಳ ಬಗ್ಗೆ ಸಾರ್ವಜನಿಕವಾಗಿ ಅಪನಂಬಿಕೆಗಳು ಬಂದಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಜೂನ್ ಒಂದರಿಂದ ಜಾರಿಗೊಳಿಸಲೇಬೇಕು ಎಂದು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಹಣಕಾಸು ಇಲಾಖೆ ಏನೇ ಸಬೂಬು ಹೇಳಿದರೂ ಅದನ್ನು ಬದಿಗಿರಿಸಿ, ಯೋಜನೆ ಮೊದಲು ಅನುಷ್ಠಾನಗೊಳಿಸಿ, ನಂತರ ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ತೀರ್ಮಾನಕ್ಕೆ ಬಂದಿದ್ದಾರೆ.

ಆಯಾ ಇಲಾಖೆಯ ಸಚಿವರು ಇಂದು ಅಧಿಕಾರಿಗಳ ಸಭೆ ನಡೆಸಿದ ಬಳಿಕ ಯೋಜನೆ ಅನುಷ್ಠಾನಗೊಳಿಸಲು ಎಷ್ಟು ಹಣ ಬೇಕು? ಇದರಿಂದ ಇಲಾಖೆಗೆ ಯಾವ ರೀತಿ ಹೊರೆಯಾಗುತ್ತದೆ ನಷ್ಟವಾಗುವ ಹಣವನ್ನು ಸರ್ಕಾರ ತುಂಬಿಕೊಡಬೇಕು ಎಂಬ ವರದಿಯನ್ನು ಮುಖ್ಯಮಂತ್ರಿ ಸಚಿವಾಲಯಕ್ಕೆ ತಲುಪಿಸಿದ್ದಾರೆ.

ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಯುವ ನಿಧಿ ಹಾಗೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ನೀಡುವ ಯೋಜನೆಗಳನ್ನು ಚುನಾವಣೆಗೆ ಮುನ್ನ ಕಾಂಗ್ರೆಸ್ ಘೋಷಿಸಿತ್ತು. (3ನೇ ಪುಟಕ್ಕೆ)

ರಾಜ್ಯ ನೌಕರರ ತುಟ್ಟಿ ಭತ್ಯೆ ಶೇ.4 ಹೆಚ್ಚಳ

ಬೆಂಗಳೂರು, ಮೇ 30 - ರಾಜ್ಯ ಸರ್ಕಾರ ನೌಕರರ ತುಟ್ಟಿ ಭತ್ಯೆಯನ್ನು ಶೇ. 4ರಷ್ಟು ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸರ್ಕಾರಿ ನೌಕರರ ಮೂಲ ವೇತನದ ಶೇ.31ರಷ್ಟಿದ್ದ ತುಟ್ಟಿ ಭತ್ಯೆಯನ್ನು ಶೇ. 35ಕ್ಕೆ ಹೆಚ್ಚಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. 2018ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ಸರ್ಕಾರಿ ನೌಕರರಿಗೆ ಜನವರಿ 1,2023ರಿಂದಲೇ ತುಟ್ಟಿ ಭತ್ಯೆ ಹೆಚ್ಚಳ ಪೂರ್ವಾನ್ವಯವಾಗಲಿದೆ.

ಬೆಂಗಳೂರು ಪೊಲೀಸ್ ಆಯುಕ್ತರಾಗಿ ದಯಾನಂದ ನೇಮಕ

ಬೆಂಗಳೂರು, ಮೇ 30- ಬೆಂಗಳೂರು ಪೊಲೀಸ್ ಆಯುಕ್ತರನ್ನಾಗಿ ಹಿರಿಯ ಪೊಲೀಸ್ ಅಧಿಕಾರಿ ಬಿ. ದಯಾನಂದ ಅವರನ್ನು ರಾಜ್ಯ ಸರ್ಕಾರ ನೇಮಿಸಿದೆ. ವಿವಿಧ ಹಿರಿಯ ಪೊಲೀಸ್ ಅಧಿಕಾರಿಗಳನ್ನು ನೂತನ ಸರ್ಕಾರ ವರ್ಗಾವಣೆ ಮಾಡಿದೆ.

1994ನೇ (3ನೇ ಪುಟಕ್ಕೆ)

ಕಲ್ಮಶಯುಕ್ತ ಪಠ್ಯ ಬದಲಾವಣೆ : ಮಧು ಬಂಗಾರಪ್ಪ

ಕಾನೂನು ತೊಡಕು ಪರಿಗಣಿಸಿ ಹಿಜಾಬ್ ಬಗ್ಗೆ ನಿರ್ಧಾರ

ಬೆಂಗಳೂರು, ಮೇ 30 - ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಹಾಗೂ ಕಲ್ಮಶಯುಕ್ತ ಪಠ್ಯಗಳನ್ನು ಬದಲಾಯಿಸುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಶಾಲಾ ಪಠ್ಯ ಪುಸ್ತಕಗಳಲ್ಲಿ ಸೇರಿಸಿದ ವಿಷಯಗಳನ್ನು ತೆಗೆದುಹಾಕಬೇಕೆಂಬ ಒತ್ತಾಯ ಕೇಳಿ ಬರುತ್ತಿದೆ. ಈ ಬಗ್ಗೆ ಶಿಕ್ಷಣ ತಜ್ಞರು, ಇಲಾಖೆ ಪ್ರಮುಖರ ಜೊತೆ ಸಭೆ ನಡೆಸಿ ಕ್ರಮ ಜರುಗಿಸಲಾಗುವುದು ಎಂದು ಅವರು ಹೇಳಿದರು.

ಯಾವುದೇ ಶೈಕ್ಷಣಿಕ ವಿಚಾರಗಳು ಗುಣಮಟ್ಟದಿಂದ ಕೂಡಿರಬೇಕು. ಹೀಗಾಗಿ ನಕಾರಾತ್ಮಕ ಅಂಶ ಹೊಂದಿರುವ ಪಠ್ಯಗಳನ್ನು ಬದಲಾವಣೆ ಮಾಡುತ್ತೇವೆ. ಹಂತ ಹಂತವಾಗಿ ಈ ಪರಿಷ್ಕರಣೆ ನಡೆಯಲಿದೆ ಎಂದವರು ತಿಳಿಸಿದರು.

ಪಠ್ಯ ಪರಿಷ್ಕರಣೆ ಬಗ್ಗೆ ಈಗಾಗಲೇ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರ ಮಾರ್ಗದರ್ಶನ ಪಡೆದು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಹಿಜಾಬ್ ಧರಿಸುವ ವಿಚಾರದ ಕುರಿತು ಪ್ರತಿಕ್ರಿಯಿಸಿದ ಅವರು, ಹಿಜಾಬ್ ವಿಚಾರವಾಗಿ ಕೆಲವೊಂದು ಕಾನೂನು ತೊಡಕುಗಳಿವೆ. ಅವುಗಳನ್ನು ನೋಡಿಕೊಂಡು ಮುಂದುವರೆಯಬೇಕು. ಎಲ್ಲ ವಿದ್ಯಾರ್ಥಿ ಗಳಿಗೆ ಅನುಕೂಲವಾಗುವ ರೀತಿಯಲ್ಲೇ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ ಹಾಗೂ ಎಲ್ಲ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ಕಾನೂನು ಹೋರಾಟ ನಡೆಸುತ್ತೇವೆ ಎಂದು ಸಚಿವರು ತಿಳಿಸಿದರು.

ಶೈಕ್ಷಣಿಕ ವರ್ಷ ಆರಂಭವಾಗುತ್ತಿರುವ ಬೆನ್ನಲ್ಲೇ ಇಲಾಖೆ ಇದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದೆ. ಪಠ್ಯ ಪುಸ್ತಕ, ಸಮವಸ್ತ್ರ ವಿತರಣೆಯಲ್ಲಿ ಯಾವುದೇ ಗೊಂದಲವಿಲ್ಲದೆ ಸಮರ್ಪಕ ಕಾರ್ಯಾರಂಭ ಮಾಡಲಾಗುತ್ತದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ಶಿಕ್ಷಣ ಪ್ರಾಥಮಿಕ ಹಕ್ಕು, ಶುಲ್ಕಕ್ಕಾಗಿ ಶಿಕ್ಷಣಕ್ಕೆ ಅಡ್ಡಿ ಬೇಡ : ಸಚಿವ ಮಹಾದೇವಪ್ಪ ಎಚ್ಚರಿಕೆ

ಬೆಂಗಳೂರು, ಮೇ 30 – ಶಿಕ್ಷಣ ಪ್ರಾಥಮಿಕ ಹಕ್ಕಾಗಿದೆ. ಶುಲ್ಕದ ನೆಪ ಒಡ್ಡಿ ಯಾವ ವಿದ್ಯಾರ್ಥಿಯನ್ನೂ ಶಿಕ್ಷಣದ ಸೌಲಭ್ಯದಿಂದ ವಂಚಿಸುವಂತಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹಾದೇವಪ್ಪ ಎಚ್ಚರಿಸಿದ್ದಾರೆ.

ಕಳೆದ ಸರ್ಕಾರದ ಅವಧಿಯಲ್ಲಿ ಬಡ ಮಕ್ಕಳು ಶುಲ್ಕ ಪಾವತಿಸದೇ ಇದ್ದರೆ ಶಿಕ್ಷಣ ಪಡೆಯುವುದಕ್ಕೆ ಸಾಕಷ್ಟು ಅಡ್ಡಿ ಮಾಡಲಾಗುತ್ತಿತ್ತು. ಆದರೆ, ಶಿಕ್ಷಣ ಎನ್ನುವುದು ಪ್ರಾಥಮಿಕವಾದ ಹಕ್ಕಾಗಿದ್ದು ಶುಲ್ಕದ ನೆಪವೊಡ್ಡಿ ಯಾವುದೇ ವಿದ್ಯಾರ್ಥಿಗೂ ಕೂಡಾ (3ನೇ ಪುಟಕ್ಕೆ)

ಗ್ಯಾರಂಟಿ ಅಕ್ಕಿ : ಕೇಂದ್ರ ಇಲ್ಲವೇ ಟೆಂಡರ್ ಮೂಲಕ ಖರೀದಿ

ಬೆಂಗಳೂರು, ಮೇ 30 - ನಾವು ಕೊಟ್ಟ ಭರವಸೆಯಂತೆ ಹತ್ತು ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡುವುದು ಖಚಿತ. ಯಾವಾಗ ನೀಡಬೇಕು ಎಂಬುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಧಾರ ಮಾಡುತ್ತಾರೆ ಎಂದು ಆಹಾರ ಸಚಿವ ಕೆ.ಹೆಚ್ ಮುನಿಯಪ್ಪ ಹೇಳಿದರು. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲು ಕೇಂದ್ರ ಸರ್ಕಾರದ ಬಳಿ ಅಕ್ಕಿಯನ್ನು ಕೇಳುತ್ತೇವೆ. ಈಗ ಯಾವ ದರದಲ್ಲಿ ಅಕ್ಕಿ ಕೊಡುತ್ತಾರೋ ಅದೇ ದರದಲ್ಲಿ ನೀಡುವಂತೆ ಮನವಿ ಮಾಡುತ್ತೇವೆ. ಕೇಂದ್ರ ಸರ್ಕಾರ ಅಕ್ಕಿ ಕೊಡದೇ ಹೋದಲ್ಲಿ ಟೆಂಡರ್ ಕರೆಯುತ್ತೇವೆ ಎಂದು ತಿಳಿಸಿದರು. ಹೊಸ ಕಾರ್ಡ್‌ಗಳಿಗೆ ಬೇಡಿಕೆ ಬರುತ್ತಿದೆ. ಈ ನಿಟ್ಟಿನಲ್ಲಿ ಮಾನದಂಡಗಳನ್ನು ಆಧರಿಸಿ ಹೊಸ ಕಾರ್ಡ್ ವಿತರಣೆ ಮಾಡುತ್ತೇವೆ. ನಕಲಿ ಕಾರ್ಡ್‌ಗಳ ಬಗ್ಗೆ ಮುಂದಿನ ದಿನಗಳಲ್ಲಿ ನಿರ್ಧಾರ ಮಾಡುತ್ತೇವೆ ಎಂದು ತಿಳಿಸಿದರು.

ಮಹಾರಾಷ್ಟ್ರ ರೈತರಿಗೆ ವರ್ಷಕ್ಕೆ 6,000 ರೂ.

ಮುಂಬೈ, ಮೇ 30 – ರೈತರಿಗೆ ಪ್ರತಿ ವರ್ಷ 6,000 ರೂ. ಹಣ ನೀಡುವ ಯೋಜನೆಗೆ ಮಹಾರಾಷ್ಟ್ರ ಸರ್ಕಾರ ಚಾಲನೆ ನೀಡಿದೆ. ಈ ಯೋಜನೆಗೆ ನಮೋ ಶೆಟ್ಕಾರಿ ಮಹಾಸನ್ಮಾನ್ ಯೋಜನೆ ಎಂಬ ಹೆಸರಿಡಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಏಕನಾಥ ಶಿಂಧೆ, ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಹಣದ ಜೊತೆಗೆ ಈ ಹಣವನ್ನು ಕಂತುಗಳಲ್ಲಿ ನೀಡಲಾಗುವುದು ಎಂದಿದ್ದಾರೆ.

ನೌಕರರ ಸಾರ್ವತ್ರಿಕ ವರ್ಗಾವಣೆಗೆ ಮಾರ್ಗಸೂಚಿ

ಬೆಂಗಳೂರು, ಮೇ 30 - 2023-24ನೇ ಸಾಲಿ ನಲ್ಲಿ ಗ್ರೂಪ್ ಎ, ಬಿ, ಸಿ ಡಿ ನೌಕರರ ಸಾರ್ವತ್ರಿಕ ವರ್ಗಾ ವಣೆಗೆ ಅವಕಾಶ ನೀಡಿ ರಾಜ್ಯ ಸರ್ಕಾರ ಮಾರ್ಗಸೂಚಿ ಪ್ರಕಟಿಸಿದೆ.

ಒಂದು ಜೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ.6ರನ್ನು ಮೀರದಂತೆ ಸಾರ್ವತ್ರಿಕ ವರ್ಗಾವಣೆ ಕೈಗೊಳ್ಳಲು ಆಯಾ ಇಲಾಖಾ ಸಚಿವರಿಗೆ ರಾಜ್ಯ ಸರ್ಕಾರ ಅಧಿಕಾರ ನೀಡಿದೆ.

ಜೂ.1 ರಿಂದ ಜೂ.15 ರವರೆಗೆ ಸಾರ್ವತ್ರಿಕ ವರ್ಗಾವಣೆ ಕೈಗೊಳ್ಳಲು ಆಯಾ ಇಲಾಖಾ ಸಚಿವರಿಗೆ ಅಧಿಕಾರ ನೀಡಲಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಹೇಮಲತ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

12ನೇ ತರಗತಿ ಪಠ್ಯದಿಂದ ಖಲಿಸ್ತಾನ ಉಲ್ಲೇಖ ಕೈ ಬಿಟ್ಟ ಎನ್.ಸಿ.ಇ.ಆರ್.ಟಿ.

ನವದೆಹಲಿ, ಮೇ 30-12ನೇ ತರಗತಿಯ ರಾಜ್ಯ ಶಾಸ್ತ್ರ ಪಠ್ಯದಿಂದ ಖಲಿಸ್ತಾನ ಕುರಿತ ಉಲ್ಲೇಖವನ್ನು ಎನ್.ಸಿ.ಇ.ಆರ್.ಟಿ. ತೆಗೆದು ಹಾಕಿದೆ. ಶಿರೋಮಣಿ ಗುರು ದ್ವಾರ ಪ್ರಬಂಧಕ ಸಮಿತಿ ಆಕ್ಷೇಪದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. 12ನೇ ತರಗತಿ ರಾಜ್ಯಶಾಸ್ತ್ರ ಪಠ್ಯದಲ್ಲಿ ಐತಿಹಾಸಿಕ ಅಂಶಗಳನ್ನು ತಪ್ಪಾಗಿ ಬಿಂಬಿಸಲಾಗಿದೆ ಎಂದು ಗುರುದ್ವಾರ ಸಮಿತಿ ಕಳೆದ ತಿಂಗಳು ಆರೋಪಿಸಿತ್ತು.

ಈ ಹಿಂದೆ ರಾಜ್ಯಶಾಸ್ತ್ರದ ಪಾಠದಲ್ಲಿ ಆನಂದ್ ಸಾಹಿಬ್ ನಿರ್ಣಯದ ಕುರಿತು ತಿಳಿಸಲಾಗಿತ್ತು. ಆನಂದಪುರ್ ಸಾಹಿಬ್ ನಿರ್ಣಯದಲ್ಲಿ ಒಕ್ಕೂಟ ವ್ಯವಸ್ಥೆ ಬಲಪಡಿಸುವ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಆದರೆ, ಈ ನಿರ್ಣಯವನ್ನು ಪ್ರತ್ಯೇಕ ಸಿಖ್ ದೇಶದ ಮನವಿ ಎಂದೂ ವ್ಯಾಖ್ಯಾನಿಸಬಹುದಾಗಿತ್ತು ಎಂದು ತಿಳಿಸಲಾಗಿತ್ತು.

ಬದಲಾಯಿಸಿದ ಪಠ್ಯದಲ್ಲಿ ಆನಂದಪುರ್ ಸಾಹಿಬ್ ನಿರ್ಣಯದಲ್ಲಿ ಒಕ್ಕೂಟ ವ್ಯವಸ್ಥೆ ಬಲಗೊಳಿಸುವ ಬಗ್ಗೆ ತಿಳಿಸಲಾಗಿತ್ತು ಎಂದಷ್ಟೇ ಹೇಳಲಾಗಿದೆ.

|| ಶ್ರೀ ಕೂಡಲ ಸಂಗಮೇಶ್ವರ ಪ್ರಸನ್ನ ||
ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ, 3ನೇ ಮೇನ್, 1ನೇ ಕ್ರಾಸ್ ಎ ಬ್ಲಾಕ್, ಡಿ.ಸಿ.ಎಂ. ಟೌನ್‌ಶಿಪ್ ವಾಸಿ
ಶ್ರೀಮತಿ ಎಲ್.ಜಿ. ಶಾರದಮ್ಮ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿ.: 16.05.2023ನೇ ಮಂಗಳವಾರ ಬೆಳಿಗ್ಗೆ: 7.30 ಕ್ಕೆ ನನ್ನ ಪೂಜ್ಯ ಪತಿಯವರಾದ
ಶ್ರೀ ಎಲ್.ಜಿ. ಅಮೃತಪ್ಪ (ವರ್ತಕರು)
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಸಮಾರಾಧನೆಯನ್ನು ದಿನಾಂಕ 31.05.2023ನೇ ಬುಧವಾರ ಬೆಳಿಗ್ಗೆ 11.00 ಕ್ಕೆ ದಾವಣಗೆರೆ, ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿರುವ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಎಲ್.ಜಿ. ಶಾರದಮ್ಮ ಮತ್ತು ಮಕ್ಕಳು,
ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಶ್ರೀ ಎಲ್.ಎ. ವೀರೇಶ್, ಮೊ : 94498 15899, 83105 37925
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಲು ಕೋರಿದೆ.



ಕುರುವಾ ಗ್ರಾಮದಲ್ಲಿ ಬಿದ್ದ ಭಾರೀ ಮಳೆಗೆ ಅಪಾರ ಹಾನಿ : ಪರಿಹಾರಕ್ಕೆ ಆಗ್ರಹ

ನ್ಯಾಮತಿ, ಮೇ 30- ಕಳೆದ ರಾತ್ರಿ ಸುರಿದ ಭಾರೀ ಗಾಳಿ-ಮಳೆಗೆ ತಾಲ್ಲೂಕಿನ ಕುರುವಾ ಗ್ರಾಮದಲ್ಲಿ ಅಪಾರ ಪ್ರಮಾಣದ ಹಾನಿಯಾಗಿದ್ದು, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಸ್ಥಳಕ್ಕೆ ಭೇಟಿ ನೀಡಿ ಮಳೆಹಾನಿ ವೀಕ್ಷಿಸಿದರು.

ಇದೇ ವೇಳೆ ಮಾತನಾಡಿದ ರೇಣುಕಾಚಾರ್ಯ ಸೋಮವಾರ ಸುರಿದ ಭಾರೀ ಗಾಳಿ-ಮಳೆಯಿಂದಾಗಿ ಕುರುವಾ ಗ್ರಾಮದಲ್ಲಿ ಬೃಹದಾಕಾರದ ಎರಡು ಮರಗಳು ಮನೆಗಳ ಮೇಲೆ ಬಿದ್ದ ಪರಿಣಾಮ 3 ಮನೆಗಳಿಗೆ ಹಾನಿಯಾಗಿದ್ದು, ವಿದ್ಯುತ್ ಕಂಬಗಳು ಧರೆಗುರುಳಿವೆ ಎಂದರು.

ವಿಷಯ ತಿಳಿಯುತ್ತಿದ್ದಂತೆ ಗ್ರಾಮಕ್ಕೆ ಭೇಟಿ ನೀಡಿ ಖುದ್ದು ಮಳೆಹಾನಿ ವೀಕ್ಷಿಸಿದ್ದೇನೆಂದ ರೇಣುಕಾಚಾರ್ಯ, ಮರಗಳು ಮನೆಗಳ ಮೇಲೆ ಬಿದ್ದ ಪರಿಣಾಮ ಈರಮ್ಮ-ಕರಿಬಸಪ್ಪ, ಲಲಿತಮ್ಮ-ಬಸವರಾಜಪ್ಪ, ಮಹೇಶ್ವರಪ್ಪ ಎಂಬುವವರಿಗೆ ಸೇರಿದ ಮನೆಗಳಿಗೆ ಹಾನಿಯಾಗಿದ್ದರೆ, ವಿನಯ್ ಕುಮಾರ್ ಅವರ ಗೊಬ್ಬರದ ಅಂಗಡಿಯ ಮೇಲ್ಛಾವಣಿ ಹಾರಿ ಹೋಗಿದ್ದು ಗೊಬ್ಬರದ ಅಂಗಡಿಗೆ ನೀರು ನುಗ್ಗಿ ನಷ್ಟ ಸಂಭವಿಸಿದೆ ಎಂದರು.

ಗಾಳಿ ಮಳೆಯಿಂದಾಗಿ ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿದ್ದು, ಇಡೀ ಗ್ರಾಮ ಕಳೆದ ರಾತ್ರಿಯಿಂದ ಕತ್ತಲೆಯಲ್ಲಿ ಕಾಲ ಕಳೆಯ ಬೇಕಾಗಿದ್ದು ಕೂಡಲೇ ಅಧಿಕಾರಿಗಳು, ವಿದ್ಯುತ್ ವ್ಯವಸ್ಥೆ ಸರಿ ಮಾಡುವಂತೆ ಅಧಿಕಾರಿಗಳಿಗೆ ಕರೆ ಮಾಡಿ ಎಚ್ಚರಿಸಿದರು.

ಬೇಸರ ವ್ಯಕ್ತ ಪಡಿಸಿದ ರೇಣುಕಾಚಾರ್ಯ : ಮನೆಗಳ ಮೇಲೆ ಮರ ಬಿದ್ದು ಜಖಂ ಆಗಿದ್ದನ್ನು ಕಂಡು ರೇಣುಕಾಚಾರ್ಯ ಬೇಸರ ವ್ಯಕ್ತ ಪಡಿಸಿದರಲ್ಲದೇ, ಕೂಡಲೇ ಅಧಿಕಾರಿಗಳು ವರದಿ ಸಿದ್ದಪಡಿಸುವಂತೆ ತಿಳಿಸಿದ ಅವರು, ಮನೆ ಕಳೆದುಕೊಂಡವರಿಗೆ ಸೂಕ್ತ ಪರಿಹಾರ ಕೊಡುವಂತೆ ಸರ್ಕಾರಕ್ಕೆ ಆಗ್ರಹಿಸಿದರು.

ಓಸಿ, ಇಸ್ಪೀಟ್, ಜೂಜು ರಹಿತ ರಾಣೇಬೆನ್ನೂರು ನನ್ನ ಕನಸು

ರಾಣೇಬೆನ್ನೂರು, ಮೇ 30- ಅನೇಕ ಬಡ ಕುಟುಂಬಗಳು ಓಸಿ, ಇಸ್ಪೀಟ್ ಆಟಗಳಿಂದ ನಲುಗಿಹೋಗಿವೆ. ಮನೆಗಳಲ್ಲಿನ ಪಾತ್ರೆ-ಪಡಗಗಳು, ಹೆಂಡಿರ ಕೊರಳೊಳಗಿನ ತಾಳಿಗಳನ್ನು ವತ್ತೆ ಇಟ್ಟ, ಮಾರಾಟ ಮಾಡಿದ ಸಾವಿರಾರು ಉದಾಹರಣೆಗಳು ಕಂಡುಬರುತ್ತಿವೆ. ಬಡವರ ಬದುಕಿಗೆ ಮಾರಕವಾಗಿರುವ ಈ ಪಿಡುಗನ್ನು ಇಂದಿನಿಂದಲೇ ಬಂದ್ ಮಾಡು ವಂತೆ ಪೊಲೀಸರಿಗೆ ಕಟ್ಟಪ್ಪಣೆ ಮಾಡಿರುವುದಾಗಿ ಶಾಸಕ ಪ್ರಕಾಶ್ ಕೋಳಿವಾಡ ಹೇಳಿದರು.

ಶಾಸಕ ಪ್ರಕಾಶ್ ಕೋಳಿವಾಡ

ಇಲ್ಲಿನ ಖಾಸಗಿ ವಸತಿ ಗೃಹದ ಸಭಾಭವನದಲ್ಲಿ ಇಂದು ಏರ್ಪಾಡಾಗಿದ್ದ ಸಮಾರಂಭದಲ್ಲಿ ಪತ್ರಕರ್ತರ ಗೌರವ ಸ್ವೀಕರಿಸಿ ಅವರು ಮಾತನಾಡಿದರು.

ಚುನಾವಣೆಯಲ್ಲಿ ಪ್ರಕಾಶ ಕೋಳಿವಾಡ ಗೆಲ್ತಾರೆ, ಸೋಲ್ತಾರೆ. ಇಂದು ಮಳೆ ಬರುತ್ತೆ, ಇಲ್ಲಾ ಎನ್ನುವುದರಿಂದ ಹಿಡಿದು ಕ್ರಿಕೆಟ್ ಮುಂತಾದ ಬದುಕಿನಲ್ಲಿ ಬರುವ ಎಲ್ಲ ಚಟುವಟಿಕೆಗಳಿಗೂ ಬೆಟ್ ಕಟ್ಟುವುದು ಸಾಮಾನ್ಯವಾಗಿದೆ. ಇಂತಹ ಜೂಜುಗಳಿಂದ ಯುವಕರ ಬದುಕು ದಾರಿ ತಪ್ಪಿದ ಅನೇಕ ಉದಾಹರಣೆಗಳು ಎಲ್ಲ ಹಂತಗಳಲ್ಲೂ ಕೇಳಿಬರುತ್ತಿದ್ದು. ಜೂಜು ರಹಿತ ರಾಣೇಬೆನ್ನೂರು ಮಾಡುವುದು ನನ್ನ ಕನಸಾಗಿದೆ. ತಾಲ್ಲೂಕಿನಲ್ಲಿ ಎಲ್ಲಿಯೇ ಆಗಲಿ ಇಂತಹ ಜೂಜಾಟ ಕಂಡುಬಂದರೆ ಪೋಲಿಸರ ಮೇಲೆಯೇ ಕಾನೂನು ಕ್ರಮ ಜರುಗಿಸುವುದಾಗಿ ತಮ್ಮ ಬಿಗಿ ನಿಲುವು ಪ್ರಕಟಿಸಿದರು.

ಸಂಚಾರಿ ನಿಯಮ: ನಗರದಲ್ಲಿ ಬಹಳಷ್ಟು ವಾಹನ ಸವಾರರು ಸಂಚಾರಿ ನಿಯಮಗಳನ್ನು ಪಾಲಿಸುತ್ತಿಲ್ಲ. ಇದು ನನ್ನ ನಿರುದ್ಯೋಗ ರಹಿತ ಗ್ಯಾರಂಟಿಗೆ ತೊಡಕಾಗಲಿದೆ. ಹೊರ ರಾಜ್ಯ, ಹೊರ ದೇಶಗಳಿಂದ ಬರುವ ಉದ್ಯೋಗಪತಿಗಳು ರಸ್ತೆ, ನೀರು, ಸ್ವಚ್ಛತೆ, ರಸ್ತೆ ನಿಯಮ ಪಾಲನೆ ಮುಂತಾದ ಮೂಲಭೂತ ಸೌಕರ್ಯಗಳನ್ನು ಅಪೇಕ್ಷಿಸುತ್ತಾರೆ. ಆ ದಿಶೆಯಲ್ಲಿ ನಾಗರಿಕರು ಸಹಕಾರ ನೀಡಬೇಕು ಎಂದು ಮನವಿ ಮಾಡಿದ ಶಾಸಕರು ಇಲ್ಲೂ ಕಾನೂನಿನ ಪ್ರಯೋಗ ಬಿಗಿಗೊಳಿಸಲಾಗುವುದು ಎಂದರು.

ಪ್ರವಾಸಿ ತಾಣ: ಜಗತ್ತಿನಲ್ಲಿ ರಾಜಸ್ಥಾನ ಮತ್ತು ರಾಣೇಬೆನ್ನೂರು ಸೇರಿದಂತೆ ಎರಡು ಕಡೆ ಮಾತ್ರ ಕೃಷ್ಣಮೃಗ ಅಭಯಾರಣ್ಯಗಳಿದ್ದು, ಇಲ್ಲಿಯದನ್ನು ಅಭಿವೃದ್ಧಿಪಡಿಸುವುದು, ನಗರ ಛಾಯೆಗಳಿರದೆ ಹಳ್ಳಿಯ ಸೊಗಡು ಪ್ರತಿಬಿಂಬಿಸುವ ಮನೆಗಳು, ನಗರದ ದೊಡ್ಡಕೆರೆಯ ನೀಲನಕ್ಷೆಯನ್ನು ಪೂರ್ಣಗೊಳಿಸುವುದು, ಪ್ರವಾಸೋದ್ಯಮ ಬೆಳೆಸಿ ವಿದೇಶಿಯರನ್ನು ಆಕರ್ಷಿಸುವ ಪ್ರವಾಸಿ ತಾಣ ನಿರ್ಮಾಣ ಮಾಡುವ ಬಯಕೆ ನನ್ನದಾಗಿದೆ ಎಂದು ಶಾಸಕ ಪ್ರಕಾಶ ಹೇಳಿದರು.

50 ವರ್ಷಗಳಿಂದ ತಾಲ್ಲೂಕಿನ ಜನರ ಪ್ರೀತಿ ಪಡೆದುಕೊಂಡಿದ್ದ ನನ್ನ ತಂದೆ ಕೆ.ಬಿ. ಕೋಳಿವಾಡ ಅವರು ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಉಳಿದಿರುವ ರಿಂಗ್ ರಸ್ತೆ, ಉಪವಿಭಾಗಾಧಿಕಾರಿ ಕಛೇರಿ ಸೇರಿದಂತೆ ಅವರ ಯೋಚನೆಯ ಕಾರ್ಯಗಳನ್ನು ಪೂರ್ಣಗೊಳಿಸುತ್ತೇನೆ. ನಗರದಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳು ಹಾಳಾಗಿವೆ. ಅವು ಕಾರ್ಯ ನಿರ್ವಹಿಸುತ್ತಿಲ್ಲವಾದ್ದರಿಂದ ಅಪರಾಧಗಳ ತಡೆ ಹಾಗೂ ಅಪರಾಧಿಗಳ ಪತ್ತೆಗೆ ತೊಂದರೆಯಾಗಿದ್ದು, ನಗರದಾದ್ಯಂತ ಶೀಘ್ರವಾಗಿ ಕ್ಯಾಮರಾಗಳನ್ನು ಅಳವಡಿಸಲಾಗುವುದು ಎಂದರು.

ಸ್ಥಳೀಯನಾದ ನಾನು, ನನ್ನ ತಾಲ್ಲೂಕಿನ ಜನರಿಗೆ ಒಳ್ಳೆಯದನ್ನು ಮಾಡಬೇಕು ಎನ್ನುವ ಹಂಬಲ ನನ್ನದಾಗಿದೆ. ಆಕಸ್ಮಿಕವಾಗಿ ತಪ್ಪು ನಡೆದರೆ ಅದನ್ನ ವೈಭವೀಕರಿಸದೆ, ನಾನು ಮಾಡುವ ಜನಪರ ಕಾರ್ಯಗಳಿಗೆ ಪ್ರೋತ್ಸಾಹಿಸಿರಿ. ಜನರ ಪ್ರೀತಿಯನ್ನು ನಿರಂತರವಾಗಿರಿಸಿಕೊಳ್ಳುವ ಪ್ರಯತ್ನ ನನ್ನದಾಗಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

'ವಿಶ್ವ ತಂಬಾಕು ರಹಿತ ದಿನ' ನಗರದಲ್ಲಿ ಇಂದು ಜಾಥಾ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕು. ಕ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಜಿಲ್ಲಾ ವಕೀಲರ ಸಂಘ, ಚಿಗಟೇರಿ ಜಿಲ್ಲಾ ಆಸ್ಪತ್ರೆ ಹಾಗೂ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಇವರ ಸಂಯುಕ್ತಾಶ್ರಾಯದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ 'ವಿಶ್ವ ತಂಬಾಕು ರಹಿತ ದಿನ' ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ವರಿ ಎನ್.ಹೆಗಡೆ ಉದ್ಘಾಟಿಸುವರು. ಜಿಲ್ಲಾ ಆರೋಗ್ಯ ಮತ್ತು ಕು. ಕ ಅಧಿಕಾರಿ ಡಾ. ನಾಗರಾಜ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಎಂ. ಕರೆಣ್ಣವರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಅರುಣ್ ಕುಮಾರ್, ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ. ಸುಭಾಶ್‌ಚಂದ್ರ, ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಬಸವಲಿಂಗಪ್ಪ ಶಿವನಕೆರೆ ಭಾಗವಹಿಸುವರು.

ಹರಿಹರ : ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ

ಹರಿಹರ, ಮೇ 30 - ತಾಲ್ಲೂಕಿನ ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ 64 ಪ್ರೌಢ ಶಾಲೆಗಳು ಮತ್ತು ಪ್ರಾಥಮಿಕ 227 ಶಾಲೆಗಳು ಇವೆ. ಶಾಲೆಯ ಮಕ್ಕಳಿಗೆ ಉಚಿತ ಸಮವಸ್ತ್ರ ಸೇರಿದಂತೆ, ಸೌಲಭ್ಯಗಳ ವಿತರಣೆ ಮಾಡಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ತಿಳಿಸಿದರು.

ನಗರದ ಹೊರವಲಯದ ಸಾಲಕಟ್ಟೆ, ಶ್ರೀನಿವಾಸ್ ಕ್ಯಾಂಪ್ ಶಾಲಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ವಿತರಣೆ ಮಾಡಿ ಮಾತನಾಡಿದರು. ಬಡ ಮಕ್ಕಳಿಗೆ ಸರ್ಕಾರ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಊಟ, ಹಾಲು, ಹಣ್ಣು ಸೇರಿದಂತೆ ಹಲವಾರು ಬಗೆಯ ಸೌಲಭ್ಯಗಳನ್ನು ಒದಗಿಸು ತ್ತದೆ. ವಿದ್ಯಾರ್ಥಿಗಳು ಇದನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಮುಂದಿನ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳಲಿ ಎಂದರು.

ಮಾ.ಸ.ಬ ಕಾಲೇಜಿನಲ್ಲಿ ಪರೀಕ್ಷೆ ತಯಾರಿ ಕಾರ್ಯಕ್ರಮ

ದಾವಣಗೆರೆ, ಮೇ 30- ನಗರದ ಮಾ.ಸ.ಬ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಉದ್ಯೋಗ ಕೋಶದ ವತಿಯಿಂದ ಪದವಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿ ಮತ್ತು ಸಲಹೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಧಾರವಾಡದ ಗುರುದೇವ್ ಅಕಾಡೆಮಿ ಆಡಳಿತಾಧಿಕಾರಿ ಶಂಕರ್ ಆರ್. ಹಂಚಿ ಮತ್ತು ತರಬೇತುದಾರ ಶ್ರೀಕಾಂತ್ ಎಂ. ಆಗಮಿಸಿ ಪದವಿ ನಂತರ ವಿದ್ಯಾರ್ಥಿಗಳು ಯಾವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು ಮತ್ತು ಹೇಗೆ ತಯಾರಿಯನ್ನು ಮಾಡಿಕೊಳ್ಳಬೇಕು ಎಂಬ ಮಾಹಿತಿ ನೀಡಿದರು.

ಪ್ರಾಂಶುಪಾಲರಾದ ಪ್ರೊ. ನೀಲಾಂಬಿಕಾ ಜಿ.ಸಿ. ಉದ್ಯೋಗ ಕೋಶದ ಸಂಚಾಲಕರಾದ ಡಾ. ವಿಜಯ್ ಕುಮಾರ್, ಡಾ.ರಾಘವೇಂದ್ರ ಆರ್, ಡಾ.ಪ್ರವೀಣ್ ಕುಮಾರ್, ಪ್ರೊ. ರಾವ್ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ನಿವೃತ್ತ ಕುಲಪತಿಗಳ ನಿಯೋಗದಿಂದ ಸಿಎಂಗೆ ಅಭಿನಂದನೆ

ಬೆಂಗಳೂರು, ಮೇ 30- ನಿವೃತ್ತ ಕುಲಪತಿಗಳ ನಿಯೋಗವು ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಅಭಿನಂದಿಸಿತು. ಈ ಸಂದರ್ಭದಲ್ಲಿ ಹಲವು ಸಂಗತಿಗಳ ಕುರಿತು ಚರ್ಚೆ ನಡೆಸಲಾಯಿತು.

ಮಕ್ಕಳ ಕಿಡ್ನಿ ರೋಗ ತಜ್ಞರ ಕಾರ್ಯಾಗಾರ

ದಾವಣಗೆರೆ, ಮೇ 30- ನಗರದ ಜೆಜೆಎಂ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಎಸ್.ಎಸ್.ವೈದ್ಯಕೀಯ ಮಹಾವಿದ್ಯಾಲಯ ಜಂಟಿಯಾಗಿ ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಮಕ್ಕಳ ಕಿಡ್ನಿ ರೋಗದ ಕುರಿತಂತೆ ಕಾರ್ಯಾಗಾರ ಹಮ್ಮಿ ಕೊಳ್ಳಲಾಗಿತ್ತು. ಡಾ.ಪ್ರಸಾದ್ ಮತ್ತು ಡಾ. ಮೂಗನಗೌಡ ಕಾರ್ಯಾಗಾರ ಉದ್ಘಾಟಿಸಿದರು. ಬೆಂಗಳೂರು ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ತಜ್ಞರೂ ಸಹ ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಹಾನಿಯಾದ ಮನೆಗಳಿಗೆ ಶೀಘ್ರದಲ್ಲೇ ಪರಿಹಾರ

ಹೊನ್ನಾಳಿ

ಹೊನ್ನಾಳಿ, ಮೇ 30- ತತ್‌ಕ್ಷಣವೇ ಹಾನಿಯಾಗಿರುವ ಕುಟುಂಬಗಳ ಅಂದಾಜು ವೆಚ್ಚವನ್ನು ಸಿದ್ಧಪಡಿಸಿ ಅತೀ ಶೀಘ್ರದಲ್ಲೇ ಪರಿಹಾರ ದೊರಕುವಂತೆ ಅಗತ್ಯ ಕ್ರಮಗಳನ್ನು ಜರುಗಿಸಬೇಕೆಂದು ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಡಿ.ಎಸ್. ಸುರೇಂದ್ರ ಗೌಡ ಕಂದಾಯ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಸೋಮವಾರ ರಾತ್ರಿ ಸುರಿದ ಮಳೆ-ಗಾಳಿಗೆ ಕುಂಕುವ ಗ್ರಾಮದಲ್ಲಿ ಮನೆಗಳ ಮೇಲೆ ಮರಗಳು, ಲೈಟ್ ಕಂಬಗಳು ಬಿದ್ದ ಮಾಹಿತಿ ತಿಳಿದು ಸ್ಥಳಕ್ಕೆ ದೌಡಾಯಿಸಿ ಪರಿಶೀಲಿಸಿ ಹಾನಿಯಾದ ಮನೆಗಳ ಮಾಲೀಕರಿಗೆ ಸಾಂತ್ವನ ಹೇಳಿದರು.

ಕರಿಬಸಪ್ಪ, ಬಸವರಾಜಪ್ಪ, ಮಾಲಾ, ರಾಜಶೇಖರ, ಹಾಲಸಿದ್ದಯ್ಯ ಇವರ ಮನೆಗಳಿಗೆ ಹಾನಿಯಾಗಿದ್ದು, ಯಾವುದೇ ಪ್ರಾಣ ಹಾನಿಯಾಗಿರುವುದಿಲ್ಲ. ಸ್ಥಳದಲ್ಲಿ ತಹಶೀಲ್ದಾರ್ ಆರ್.ವಿ.ಕಟ್ಟಿ, ಉಪತಹಶೀಲ್ದಾರ್ ಸವಿತಾ, ಆರ್ಐ ಸಂತೋಷ್, ವಿಎ ಪರಶುರಾಮ್, ಬೆಸ್ಕಾಂ ಎಇಇ ಶ್ರೀನಿವಾಸ್ ನಾಯ್ಕ್, ಪಿಡಿಒ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

ಅಜ್ಞಾನ, ಆಲಸ್ಯಗಳ ನಿವಾರಣೆ ಅಧ್ಯಯನ ಆತ್ಮವಿಶ್ವಾಸದಿಂದ ಸಾಧ್ಯ

ಸಹಕಾರ ತರಬೇತಿ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿ ಹೆಚ್.ಬಿ.ಮಂಜುನಾಥ್

ಹರಪನಹಳ್ಳಿ, ಮೇ 30- ಕೈಗೊಂಡ ಕಾರ್ಯದ ಬಗ್ಗೆ ಜ್ಞಾನವಿಲ್ಲದಿದ್ದಲ್ಲಿ ಆಸಕ್ತಿ ಉಂಟಾಗುವುದಿಲ್ಲ, ನಿರಾಸಕ್ತಿಯು ಆಲಸ್ಯಕ್ಕೆ ಕಾರಣವಾಗುತ್ತದೆ, ಆಲಸ್ಯದಿಂದಾಗಿ ಸಮಯ ನಿರ್ವಹಣೆಯೂ ವಿಫಲವಾಗುವುದಲ್ಲದೇ ಮಾನಸಿಕ ಒತ್ತಡ ಉಂಟಾಗುತ್ತದೆ. ಅಜ್ಞಾನ ಮತ್ತು ಆಲಸ್ಯದ ನಿವಾರಣೆಗೆ ಅಧ್ಯಯನ ಹಾಗೂ ಆತ್ಮವಿಶ್ವಾಸಗಳೇ ಮದ್ದು ಎಂದು ಹಿರಿಯ ಪತ್ರಕರ್ತ, ಸಹಕಾರ ಸಂಪನ್ಮೂಲ ವ್ಯಕ್ತಿ ಹೆಚ್.ಬಿ.ಮಂಜುನಾಥ್ ಅಭಿಪ್ರಾಯಪಟ್ಟರು.

ಇಲ್ಲಿನ ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಒಕ್ಕೂಟ ನಿಯಮಿತ ಇದರ ಸಭಾಂಗಣದಲ್ಲಿ ಹರಪನಹಳ್ಳಿ ತಾಲ್ಲೂಕಿನ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಏರ್ಪಾಡಾಗಿದ್ದ ಒಂದು ದಿನದ ವಿಶೇಷ ತರಬೇತಿ ಶಿಬಿರದ ಪ್ರಧಾನ ಉಪನ್ಯಾಸಕರಾಗಿ 'ಒತ್ತಡ ನಿರ್ವಹಣೆ, ಸಮಯ ನಿರ್ವಹಣೆ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ' ವಿಷಯವಾಗಿ ಅವರು ಮಾತನಾಡಿದರು.

ಹೈನುಗಾರಿಕೆಯು ಕೃಷಿಯ ಪ್ರಧಾನ ಉಪಕಸುಬಾಗಿದ್ದು, 1950 ಹೊತ್ತಿಗೆ ವಾರ್ಷಿಕ ಕೇವಲ 17 ಮಿಲಿಯನ್ ಟನ್‌ನಷ್ಟಿದ್ದ ನಮ್ಮ ದೇಶದ ಒಟ್ಟು ಹಾಲಿನ ಉತ್ಪಾದನೆ ಪ್ರಸ್ತುತ ಸುಮಾರು 210 ಮಿಲಿಯನ್ ಟನ್‌ನಷ್ಟು ಏರಿಕೆಯಾಗಿದ್ದು, ಜಗತ್ತಿನ ಒಟ್ಟು ಹಾಲು ಉತ್ಪಾದನೆಯ ಶೇ.23 ಕ್ಕಿಂತ ಹೆಚ್ಚು ಭಾರತದಲ್ಲಿ ಆಗುತ್ತಿದೆ.

ಕರ್ನಾಟಕದಲ್ಲಿ ಪ್ರತಿನಿತ್ಯ ಸುಮಾರು ಒಂದು ಕೋಟಿ ಎಂಟು ಲಕ್ಷ ಲೀಟರ್‌ನಷ್ಟು ಹಾಲು ಉತ್ಪಾದನೆ ಆಗುತ್ತಿದ್ದು, ಕೆಎಂಎಫ್ ಪ್ರತಿನಿತ್ಯ ಸುಮಾರು 90 ಲಕ್ಷ ಲೀಟರ್‌ನಷ್ಟು ಹಾಲನ್ನು ಸಂಗ್ರಹಿಸಿ, ಸಂಸ್ಕರಿಸುತ್ತಿತ್ತು. ಪ್ರಪಂಚದ ಸುಮಾರು 60 ದೇಶಗಳಿಗೆ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ರಫ್ತು ಮಾಡುವಷ್ಟು ಸಾಮರ್ಥ್ಯವನ್ನು ನಮ್ಮ ಕೆಎಂಎಫ್ ಹೊಂದಿದೆ ಎಂದರೆ ಈ ಕ್ಷೇತ್ರದಲ್ಲಿರುವವರ ಆಸಕ್ತಿ ಹಾಗೂ ಆತ್ಮವಿಶ್ವಾಸವೂ ಕಾರಣವಾಗಿದ್ದು, ಹಾಲು ಎಂಬುವ ದ್ರವವು ತೊಟ್ಟಿಲಿನ ಪೂರ್ವದಿಂದ ಸಮಾಧಿಯ ನಂತರದವರೆಗಿನ ಎಲ್ಲಾ ಹಂತಗಳಲ್ಲೂ ಅಗತ್ಯವಾದ ಪದಾರ್ಥವಾಗಿದ್ದು, ಹೈನುಗಾರಿಕೆಯು ಕೇವಲ ಹಣ ಸಂಪಾದನೆಗಷ್ಟೇ ಅಲ್ಲ ಪುಣ್ಯ ಸಂಪಾದನೆಗೂ ಕಾರಣವಾಗಿದೆ ಮಂಜುನಾಥ್ ಹೇಳಿದರು.

ಯಾವುದೇ ನೈಸರ್ಗಿಕ, ಪ್ರಾಕೃತಿಕ ಸಂಪನ್ಮೂಲಗಳಿಗೂ ಮೌಲ್ಯ ಬರುವುದು ಅವು ಬಳಕೆಯಾದಾಗ ಮಾತ್ರ, ಹಾಗೆ ಬಳಕೆಗೆಯೋಗ್ಯ ಮಾಡಿ ಕೊಡುವುದೇ ಮಾನವ ಸಂಪನ್ಮೂಲವಾಗಿದ್ದು ಮಾನವ ಸಂಪನ್ಮೂಲದ ಅಭಿವೃದ್ಧಿಯು ಸಮಾಜದ ಅಭಿವೃದ್ಧಿಗೆ ಅತ್ಯವಶ್ಯ ಎಂದರು.

ಪ್ರತಿನಿತ್ಯ ದೈನಂದಿನ ಚಟುವಟಿಕೆಗಳ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಂಡು ಅದರಲ್ಲಿ ಅತ್ಯಗತ್ಯ, ಕಡ್ಡಾಯ, ಮುಖ್ಯ, ಅಮುಖ್ಯ ಎಂಬ ವಿಂಗಡಣೆಗಳನ್ನು ಮಾಡಿಕೊಂಡು ಸಮಯ ಮೀಸಲಿಟ್ಟು ಕಾರ್ಯಗೈದಲ್ಲಿ ಒತ್ತಡವೂ ಇರುವುದಿಲ್ಲ, ಮಾನವ ಸಂಪನ್ಮೂಲವೂ ವ್ಯರ್ಥವಾಗುವುದಿಲ್ಲ ಎಂಬುದನ್ನು ನಿದರ್ಶನಗಳ ಸಹಿತ ಮಂಜುನಾಥ್ ವಿವರಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ನಿರ್ದೇಶಕ ಹೆಚ್.ಮರುಳಸಿದ್ದಪ್ಪ, ನಮ್ಮ ದೇಶದ ಕ್ಷೀರಕ್ರಾಂತಿಯಿಂದಾಗಿ ಹಳ್ಳಿಯಿಂದ ಪಟ್ಟಣಗಳಿಗೆ ಹಾಲಿನ ಹೊಳೆ ಹರಿಯಲು, ಪಟ್ಟಣಗಳಿಂದ ಹಳ್ಳಿಗಳಿಗೆ ಹಣದ ಹೊಳೆ ಹರಿಯಲು ಕಾರಣವಾಯಿತು ಎಂದರು.

ಬಳ್ಳಾರಿ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಗಿಡ್ಡಳ್ಳಿ ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೂನಿಯನ್ ನಿರ್ದೇಶಕ ಡಿ.ಹೆಚ್. ರಾಮಣ್ಣ, ವಿಸ್ತರಣಾಧಿಕಾರಿ ಪರಮೇಶ್ವರಪ್ಪ, ಸಮಾಲೋಚಕ ವಿಜಯ ಕುಮಾರ್, ಬಳ್ಳಾರಿ ಜಿಲ್ಲಾ ಸಹಕಾರ ಯೂನಿಯನ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ನಾಗರಾಜ, ವ್ಯವಸ್ಥಾಪಕ ಎಂ ಬಸವ ರಾಜ್, ಸಿಬ್ಬಂದಿಗಳಾದ ಶ್ರೀನಿವಾಸ್, ಗುರುಬಸವ ರಾಜ ಮುಂತಾದವರು ಉಪಸ್ಥಿತರಿದ್ದರು. ಅನೂರಾಧ ಕ್ಯಾರಕಟ್ಟೆ ಪ್ರಾರ್ಥನಾ ಗೀತೆ ಹಾಡಿದರು.

ವಿದ್ಯುತ್ ಪ್ರವಹಿಸಿ ಬಾಲಕನ ಸಾವು

ನ್ಯಾಮತಿ

ನ್ಯಾಮತಿ, ಮೇ 30- ಟ್ರ್ಯಾಕ್ಟರ್ ತೊಳೆಯುವಾಗ ಆಕಸ್ಮಿಕ ವಿದ್ಯುತ್ ಪ್ರವಹಿಸಿ ದರ್ಶನ್ (18) ಎಂಬ ಹುಡುಗ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಸುರಹೊನ್ನೆ ಗ್ರಾಮದ ಹೊರವಲಯದ ಐಟಿಐ ಕಾಲೇಜು ಬಳಿಯ ಮನೆಯಲ್ಲಿ ಭಾನುವಾರ ಮುಂಜಾನೆ ನಡೆದಿದೆ.

ನ್ಯಾಮತಿ ಪಟ್ಟಣದ ಕೆಪಿಎಸ್ ಶಾಲೆಯಲ್ಲಿ ಒಂಭತ್ತನೆ ತರಗತಿ ಉತ್ತೀರ್ಣನಾಗಿದ್ದು, ಹತ್ತನೇ ತರಗತಿಗೆ ಹೋಗಬೇಕಿತ್ತು.

ಕೃಷಿ ಕುಟುಂಬದ ಹಿನ್ನೆಲೆ ಹೊಂದಿರುವ ಮನೆಯಲ್ಲಿ ಮನೆಯ ಬಳಿ ಬೆಳಿಗ್ಗೆ 7.30 ಸುಮಾರಿಗೆ ಟ್ರ್ಯಾಕ್ಟರ್ ತೊಳೆಯಲೆಂದು ಹೊಗಿದ್ದ ದರ್ಶನ್ ಬಹಳ ಸಮಯವಾದರೂ ಬಾರದ ಹಿನ್ನೆಲೆಯಲ್ಲಿ ತಾಯಿ ತಿಂಡಿ ತಿನ್ನಲು ಮಗನನ್ನು ಕರೆಯಲೆಂದು ಹೋಗಿದ್ದ ಸಂದರ್ಭದಲ್ಲಿ ಟ್ರ್ಯಾಕ್ಟರ್ ಬಳಿ ಆತ ಬಿದ್ದಿದ್ದನ್ನು ನೋಡಿ ತಾಯಿ ಚೀರಿಕೊಂಡಿದ್ದು, ರಸ್ತೆಯಲ್ಲಿ ಹೋಗುತ್ತಿದ್ದವರು ಬಂದು ನೋಡುವಷ್ಟರಲ್ಲಿ ಯುವಕ ಮೃತ ಪಟ್ಟಿದ್ದಾನೆ.

ಟ್ರ್ಯಾಕ್ಟರ್ ತೊಳೆಯಲೆಂದು ಆನ್ ಮಾಡಿದ ಮೋಟರ್‌ನಿಂದಲೇ ವಿದ್ಯುತ್ ಪ್ರವಹಿಸಿ ಮೃತಪಟ್ಟಿರುವುದಾಗಿ ತಾಯಿ ಶೈಲಜಾ ನ್ಯಾಮತಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. 2020ರ ಕೊರೊನಾ ಸಂದರ್ಭದಲ್ಲಿ ಪತಿಯೂ ಮೃತಪಟ್ಟಿರುತ್ತಾರೆ.

ಅಪರಿಚಿತ ಯುವಕನ ಶವ ಪತ್ತೆ

ದಾವಣಗೆರೆ, ಮೇ 30- ಮೊನ್ನೆ ದಿನಾಂಕ 29 ರ ಮಧ್ಯಾಹ್ನ ನಗರದ ಎಸ್ಕೇಪ್ ಹೋಟೆಲ್ ಬಳಿ ಓರ್ವ ಪುರುಷನ ಶವ ಪತ್ತೆಯಾಗಿದೆ. ಆತನು ಕಳೆದ ಕೆಲವು ದಿನಗಳ ಹಿಂದೆ ಗ್ರೀನ್ ಲ್ಯಾಂಡ್‌ಗೆ ಕೆಲಸ ಕೇಳಿಕೊಂಡು ಬಂದಾಗ ಹಾವೇರಿ ಜಿಲ್ಲೆಯ ಬ್ಯಾಡಗಿಯವನೆಂದು ತಿಳಿಸಿರುತ್ತಾನೆ, ಮಾಲೀಕರು ಆತನ ಆಧಾರ್ ಕಾರ್ಡ್ ತರಲು ಹೇಳಿರುತ್ತಾರೆ.

ನಂದೀಶ ಎಂಬ ಮೃತನು ಸುಮಾರು 40-50 ವರ್ಷದವನಾಗಿದ್ದು, ಎಣ್ಣೆಗೆಂಪು ಮೈಬಣ್ಣ, ತೆಳ್ಳನೆಯ ಮೈಕಟ್ಟು ಹೊಂದಿದ್ದು, ಮುಂದಲೆಯಲ್ಲಿ ಕಡಿಮೆ ಕೂದಲು ಇರುತ್ತದೆ. ಮೃತನು ನೀಲಿ ಬಣ್ಣದ ಫುಲ್ ಟೀ ಶರ್ಟ್ ಮತ್ತು ನೈಟ್ ಪ್ಯಾಂಟ್ ಧರಿಸಿರುತ್ತಾನೆ. ಈತನ ಗಂಡಸಿನ ವಾರಸುದಾರರು ವಿದ್ಯಾನಗರ ಪೊಲೀಸ್ ಠಾಣೆಯನ್ನು (08192-262688, ಮೊ : 9480803251) ಸಂಪರ್ಕಿಸಬಹುದಾಗಿದೆ.

ರಸ್ತೆ ಅಪಘಾತದಲ್ಲಿ ಓರ್ವನ ಸಾವು

ದಾವಣಗೆರೆ, ಮೇ 30- ತ್ಯಾವಣಿಗೆ ಗ್ರಾಮದ ಹಳ್ಳದ ಬಳಿ ಬೈಕ್‌ಗೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಶಿವಮೊಗ್ಗದ ಹಕ್ಕಿಪಿಕ್ಕಿ ಜನಾಂಗದ ಹಾಲೇಶ್ (55) ಎಂಬಾತ ಮೃತಪಟ್ಟಿದ್ದಾನೆ.

ಬೈಕ್ ಡಿವೈಡರ್‌ಗೆ ಡಿಕ್ಕಿ: ಸವಾರನಿಗೆ ಗಾಯ

ನ್ಯಾಮತಿ

ಶಿವಮೊಗ್ಗ, ಮೇ 30- ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕುಂಚೇನಹಳ್ಳಿ ಗ್ರಾಮದ ಡಿವೈಡರ್‌ಗೆ ಬೈಕ್ ಡಿಕ್ಕಿಯಾಗಿ ಬೈಕ್ ಸವಾರ ತೀವ್ರ ಗಾಯಗೊಂಡಿದ್ದಾನೆ.

ಬೈಕ್ ಸವಾರ ಸಲ್ಮಾನ್ (23) ನ್ಯಾಮತಿ ಪಟ್ಟಣದ ಶಿವಾನಂದಪ್ಪ ಬಡಾವಣೆ ನಿವಾಸಿಯಾಗಿದ್ದು, ಶಿವಮೊಗ್ಗ ನಗರದಲ್ಲಿ ಮೊಬೈಲ್ ಶಾಪ್ ಹೊಂದಿದ್ದು, ಪ್ರತಿನಿತ್ಯ ಶಿವಮೊಗ್ಗ ನ್ಯಾಮತಿ ಓಡಾಡಿಕೊಂಡಿದ್ದು ಇಂದು ಎಂದಿನಂತೆ ಶಿವಮೊಗ್ಗಕ್ಕೆ ತೆರಳುವಾಗ ಅಪಘಾತ ಸಂಭವಿಸಿದೆ.

ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಸವಾರನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಈ ಸಂಬಂಧ ಶಿವಮೊಗ್ಗ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ದೇಹದಾನಿ ಸುಲೋಚನಮ್ಮ ನಿಧನ

ದಾವಣಗೆರೆ ಸಿಟಿ
ಎಲ್‌ಐಸಿ ಕಾಲೋನಿ ವಾಸಿ,
ಚಿಕ್ಕಂದವಾಡಿ ಸಣ್ಣಗೌಡರ
ದಿ. ಈಶ್ವರಪ್ಪನವರ ಪುತ್ರ
ಪ್ರೊ. ಎಸ್.ಜಿ. ವಿರೂಪಣ್ಣನವರ
ಧರ್ಮಪತ್ನಿ
ಶ್ರೀಮತಿ ಸುಲೋಚನ
ಇವರು, ದಿನಾಂಕ 30.5.2023ರ ಮಂಗಳವಾರ ಮಧ್ಯಾಹ್ನ 3 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 74 ವರ್ಷ ವಯಸ್ಸಾಗಿತ್ತು.

ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು **ನಗರದ ನೂತನ ಕಾಲೇಜು ಹತ್ತಿರದ ಮೃತರ ಸ್ವಗೃಹದಲ್ಲಿ ದಿನಾಂಕ 31.5.2023ರ ಬುಧವಾರ ಬೆಳಿಗ್ಗೆ 11 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಜೆಜೆಎಂಸಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಮೃತರ ದೇಹವನ್ನು ಹಸ್ತಾಂತರಿಸಲಾಗುವುದು.**

ದುಃಖತಪ್ತ ಕುಟುಂಬದವರು, ಮೊ : 97417 23913

ಚಿರಸ್ಮರಣೆ

ದಿ|| ಶ್ರೀಮತಿ ಶಾಂತಾ ಬೇಲೇರಿ, ಶಿಕ್ಷಕರು

ನೀವು ನಮ್ಮನ್ನು ಅಗಲಿ ಇಂದಿಗೆ ಆರು ವರ್ಷಗಳಾದವು.
ಸದಾ ನಿಮ್ಮ ಮಾರ್ಗದರ್ಶನ ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿದೆ,
ಅನುಕ್ಷಣವು ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನ.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವೆವು.

ಪತಿ, ಮಗ, ಮಗಳು, ಸೊಸೆ, ಅಳಿಯಂದಿರು ಸಹೋದರರು, ಸಹೋದರಿಯರು ಹಾಗೂ ಬಂಧು-ಮಿತ್ರರು.

ಮರಕುಂಟಿ ಮಂಜಮ್ಮ ನಿಧನ



ಹರಪನಹಳ್ಳಿ ತಾಲ್ಲೂಕು ಜಂಬು ಲಿಂಗನಹಳ್ಳಿ ನಿವಾಸಿ ಎಲೆಬೇತೂರು ಮರಕುಂಟಿ ವಿಜಯಕುಮಾರ ಅವರ ಧರ್ಮಪತ್ನಿ ಶ್ರೀಮತಿ ಮಂಜಮ್ಮ (52) ಇವರು ದಿನಾಂಕ 30.5.2023ರ ಮಂಗಳವಾರ ಸಂಜೆ 6ಕ್ಕೆ ನಿಧನರಾಗಿರುತ್ತಾರೆ. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.5.2023ರ ಬುಧವಾರ ಬೆಳಿಗ್ಗೆ 11.30ಕ್ಕೆ ಹರಪನಹಳ್ಳಿ ತಾಲ್ಲೂಕು ಸತ್ತೂರು ಗ್ರಾಮದಲ್ಲಿರುವ ಜಮೀನಿನಲ್ಲಿ ನೆರವೇರಲಿದೆ.

ಬಸಮ್ಮ ಉಜ್ಜಪ್ಪ ತೆಂಬದ್ ನಿಧನ



ದಾವಣಗೆರೆ ದೇವರಾಜ್ ಅರಸ್ ಬಡಾವಣೆ, 'ಬಿ' ಬ್ಲಾಕ್ ನಿವಾಸಿ ದಿ. ಉಜ್ಜಪ್ಪ ನಾಗಪ್ಪ ತೆಂಬದ್ ಅವರ ಧರ್ಮಪತ್ನಿ ಶ್ರೀಮತಿ ಬಸಮ್ಮ ಉಜ್ಜಪ್ಪ ತೆಂಬದ್ ಇವರು ದಿನಾಂಕ 30.5.2023ರ ಮಂಗಳವಾರ ಸಂಜೆ 7ಕ್ಕೆ ನಿಧನರಾಗಿರುತ್ತಾರೆ. ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.5.2023ರ ಬುಧವಾರ ಮಧ್ಯಾಹ್ನ 1ಕ್ಕೆ ಮೃತರ ಸ್ವಗ್ರಾಮವಾದ ರಾಣೇಬೆನ್ನೂರು ತಾಲ್ಲೂಕು ಚಳಗೇರಿ ಗ್ರಾಮದಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

ಹರೀಶ್ ಹಳ್ಳಿ ಸಾವು: ಸಿಬಿಐಗೆ ವಹಿಸಲು ಆಗ್ರಹ

ದಾವಣಗೆರೆ, ಮೇ 30- ಸಾಮಾಜಿಕ ಕಾರ್ಯಕರ್ತ ಹರೀಶ್ ಹಳ್ಳಿ ಸಾವಿನ ಪ್ರಕರಣವನ್ನು ರಾಜ್ಯ ಸರ್ಕಾರವು ಸಿಬಿಐಗೆ ವಹಿಸುವಂತೆ ಹರೀಶ್ ಹಳ್ಳಿ ಸ್ನೇಹಿತರ ಬಳಗ ಒತ್ತಾಯಿಸಿದೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತ ನಾಡಿದ ಗುರುಪಾದಯ್ಯ ಮಠದ್, ಹರೀಶ್ ಹಳ್ಳಿ ಅವರ ಸಾವು ಆತ್ಮಹತ್ಯೆಯಲ್ಲ, ವ್ಯವಸ್ಥಿತ ಕೊಲೆ ಎಂದು ಅವರ ಕುಟುಂಬದವರು ಈಗಾಗಲೇ ದೂರು ನೀಡಿದ್ದಾರೆ. ತಪ್ಪಿತಸ್ಥ ಪೊಲೀಸರನ್ನು ಅಮಾನತ್ತು ಮಾಡಲಾಗಿದೆ. ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ. ಆದರೆ ಸಿಐಡಿ ತನಿಖೆಯಿಂದ ನ್ಯಾಯ ಸಿಗುವ ಭರವಸೆ ಇಲ್ಲ ಎಂದು ಹೇಳಿದರು.

ಹರೀಶ್ ಹಳ್ಳಿ ಸಾವಿನ ಹಿಂದೆ ದೊಡ್ಡ ಷಡ್ಯಂತ್ರ ಅಡಗಿದೆ. ಇದೊಂದು ವ್ಯವಸ್ಥಿತ ಹತ್ಯೆ. ಇದರ ಹಿಂದೆ ಕಾಣದ ಕೈಗಳಿವೆ ಎಂಬ ಅನುಮಾನವಿದೆ. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದರು.

ಹರೀಶ್ ಅವರ ಮೇಲೆ ಎಫ್ ಐ ಆರ್ ದಾಖಲಾದ ಮೂರು ದಿನಗಳ ನಂತರ ಅದೂ ಮಧ್ಯರಾತ್ರಿ ಅವರ ಮನೆಗೆ ಹೋಗಿ ಅವರನ್ನು ಆರೆಸ್ಟ್ ಮಾಡುವ ಅಗತ್ಯ ಪೊಲೀಸರಿಗೆ ಇತ್ತೇ ಹಗಲು ಹೊತ್ತಿನಲ್ಲಿಯೇ ಅವರನ್ನು ಕರೆ ತರಬಹುದಿತ್ತು? ಎಂದವರು ಪ್ರಶ್ನಿಸಿದರು.

ಅವರ ಮೇಲೆ ದಾಖಲಾಗಿದ್ದು 420 ಪ್ರಕರಣ. ಅದಕ್ಕಾಗಿ ಅವರು ಓಡಿ ಹೋಗುವ ಅಗತ್ಯವೂ ಇರಲಿಲ್ಲ. ಹರೀಶ್ ಹಳ್ಳಿ ಧೈರ್ಯವಂತ, ಹೋರಾಟಗಾರ. ಇಂತಹ ಚಿಕ್ಕ ಕೇಸ್‌ಗೆ ಹೆದರಿ ಓಡಿಹೋಗುವವನಲ್ಲ. ಆತ್ಮಹತ್ಯೆ ಮಾಡಿಕೊಳ್ಳುವ ಜಾಯಮಾನದವರೂ ಅಲ್ಲ ಎಂದರು.

ಕೊರೊನಾ ಸಮಯದಲ್ಲಿ 'ಅನಾಥ ಶವಗಳ ಮಾರಾಟ ಮಾಫಿಯಾ' ಬಗ್ಗೆ ಹರೀಶ್ ಹಳ್ಳಿ ಬಯಲಿಗೆಳೆದಿದ್ದರು. ಅಕ್ರಮ ಭೂ ಮಾಫಿಯಾ, ಅಕ್ರಮ ಗಣಿಗಾರಿಕೆ ಬಗ್ಗೆಯೂ ಅವರೂ ಹೋರಾಟ ನಡೆಸಿದ್ದರು. ಮೊಕದ್ದಮೆಗಳನ್ನೂ ಹೂಡಿದ್ದರು. ಇದರಿಂದಾಗಿ ಅವರು ಉನ್ನತ ಅಧಿಕಾರಿಗಳು ಹಾಗೂ ಕೆಲ ಪಟ್ಟಭದ್ರ ಹಿತಾಸಕ್ತಿಗಳ ವಿರೋಧ ಎದುರಿಸುತ್ತಿದ್ದರು. ಇಂದು ಅವರ ಸಾವು ಗೊಂದಲದ ಗೂಡಾಗಿದೆ. ಹೋರಾಟ ಮಾಡುವವರ ಜೀವನಕ್ಕೆ ಬೆಲೆಯೇ ಇಲ್ಲವೇ ಎಂಬಂತಾಗಿದೆ. ಅವರ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವ ಅಗತ್ಯವಿದೆ. ಈ ಹಿನ್ನೆಲೆಯಲ್ಲ ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ಇಲ್ಲದಿದ್ದರೆ ಅವರ ಪತ್ನಿಯೊಂದಿಗೆ ಕಾನೂನು ಹೋರಾಟ ನಡೆಸಲಾಗುವುದು ಎಂದರು.

ಎಂ.ಜಿ. ಶ್ರೀಕಾಂತ್ ಮಾತನಾಡಿ, ಹರೀಶ್ ಹಳ್ಳಿ ಅವರು ಭ್ರಷ್ಟಾಚಾರದ ಬಗ್ಗೆ ಹೋರಾಟ ನಡೆಸಿ, ಹಲವಾರು ಕೇಸುಗಳನ್ನು ದಾಖಲಿಸಿದ್ದರು. ಅವೆಲ್ಲವನ್ನೂ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕಿದೆ ಎಂದರು.

ಗಿರೀಶ್ ದೇವರಮನೆ ಮಾತನಾಡಿ, ಹರೀಶ್ ಸಾವಿನಿಂದಾಗಿ ಸಾಮಾಜಿಕ ಹೋರಾಟಗಾರರಲ್ಲಿ ಭಯ ಹುಟ್ಟಿಸುವ ವಾತಾವರಣ ನಿರ್ಮಾಣವಾಗಿದೆ. ಪೊಲೀಸ್ ಇಲಾಖೆ ಈ ಪ್ರಕರಣದಲ್ಲಿ ಗಂಭೀರ ಹೆಜ್ಜೆ ಇಡಬೇಕಿದೆ ಎಂದರು.

ಸಾಮಾಜಿಕ ಹೋರಾಟಗಾರರು ಪೊಲೀಸರನ್ನು ನಂಬಿಯೇ ಹೋರಾಟಕ್ಕೆ ಮುಂದಾಗುತ್ತಾರೆ. ಈ ರೀತಿಯಾದರೆ ಯಾರನ್ನು ನಂಬಬೇಕು. ಇದು ಕೇವಲ ಹರೀಶ್ ಹಳ್ಳಿಯಂತಹ ಹೋರಾಟಗಾರನ ವಿಷಯವಲ್ಲ. ರಾಜ್ಯಾದ್ಯಂತ ಹೋರಾಟಗಾರರ ಪ್ರಶ್ನೆಯಾಗಿದೆ. ಈ ಪ್ರಕರಣ ಸಾಮಾಜಿಕ ಹೋರಾಟಗಾರರ ಮೇಲೆ ಪರಿಣಾಮ ಬೀರುತ್ತದೆ. ಮುಂದೊಂದು ದಿನ ಹೋರಾಟಗಾರರೇ ಇಲ್ಲವಾಗಬಹುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಲ್ಲಿಕಾರ್ಜುನ್ ಇಂಗಳೇಶ್ವರ, ಚೇತನ್, ಬಲ್ಲೂರು ರವಿಕುಮಾರ್, ನಾಗರಾಜ ಸುರ್ವೆ, ವೀರಾಚಾರ್ ಇತರರು ಉಪಸ್ಥಿತರಿದ್ದರು.

ಸೋಲಿನ ಹತಾಶೆಯಿಂದ ಬಿಜೆಪಿ-ಜೆಡಿಎಸ್ ಗ್ಯಾರಂಟಿ ಬಗ್ಗೆ ಅಪಪ್ರಚಾರ : ಎಸ್.ರಾಮಪ್ಪ

ಹರಿಹರ

ದಾವಣಗೆರೆ, ಮೇ 30- ಕಾಂಗ್ರೆಸ್ ಚುನಾವಣೆಗೂ ಮುನ್ನ ಘೋಷಿಸಲಾಗಿದ್ದ ಐದು ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತರಲು ಬದ್ಧವಾಗಿದೆ. ಆದರೆ ಅದಕ್ಕಾಗಿ 15 ದಿನಗಳ ಕಾಲಾವಕಾಶ ಬೇಕಿದೆ ಎಂದು ಹರಿಹರ ಮಾಜಿ ಶಾಸಕ ಎಸ್.ರಾಮಪ್ಪ ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋಲಿನ ಹತಾಶೆಯಿಂದಾಗಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಗ್ಯಾರಂಟಿಗಳ ಬಗ್ಗೆ ಅಪಪ್ರಚಾರ ಮಾಡುತ್ತಾ, ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎಂದು ಆರೋಪಿಸಿದರು.

ಈ ಹಿಂದೆಯೂ ಕಾಂಗ್ರೆಸ್ ತಾನು ಘೋಷಿಸಿದ ಪ್ರಣಾಳಿಕೆಗಳಲ್ಲಿ ಬಹುತೇಕ ಎಲ್ಲವನ್ನೂ ಈಡೇರಿಸಿದೆ. ಕೊಟ್ಟ ಮಾತಿಗೆ ತಪ್ಪುವ ಪಕ್ಷ ನಮ್ಮದಲ್ಲ. ಈ ಬಾರಿಯೂ ಘೋಷಿಸಲಾಗಿರುವ ಐದೂ ಗ್ಯಾರಂಟಿಗಳನ್ನು ನೂರಕ್ಕೆ ನೂರರಷ್ಟು ಈಡೇರಿಸಲಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಎಲ್ಲರ ಖಾತೆಗೆ 15 ಲಕ್ಷ ರೂಪಾಯಿ ಹಾಕುವುದಾಗಿ ಹೇಳಿದ್ದರು. 15 ರೂಪಾಯಿ ಸಹ ಬಂದಿಲ್ಲ. ಬಿಜೆಪಿ ಮುಖಂಡರದ್ದು ಬರೀ ಸುಳ್ಳು ಆಶ್ವಾಸನೆಗಳು ಎಂದು ಹೇಳಿದರು.

ಎಂಎಲ್‌ಸಿ ಸ್ಥಾನಕ್ಕೆ ಬೇಡಿಕೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ, ಟಿಕೆಟ್ ನೀಡುವಲ್ಲಿ ನನಗೆ ಆದ ಅನ್ಯಾಯದ ಬಗ್ಗೆ ಹೇಳಿಕೊಂಡಿದ್ದೇನೆ. ನನಗೆ ವಿಧಾನಪರಿಷತ್ ಸ್ಥಾನ ನೀಡುವಂತೆಯೂ ಮನವಿ ಮಾಡಿದ್ದೇನೆ. ವರಿಷ್ಠರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೋ ಕಾದು ನೋಡಬೇಕಿದೆ ಎಂದು ಅವರು ಹೇಳಿದರು.

ಪಂಚಮಸಾಲಿ ಶ್ರೀಗಳ ಹಾಗೂ ಕಾಗಿನೆಲೆ ಸ್ವಾಮೀಜಿಗಳು ನನಗೆ ಟಿಕೆಟ್ ಕೊಡದಂತೆ ಪತ್ರ ಬರೆದಿದ್ದಾರೆ ಎಂದು ಕೆಲವರು ಹೇಳುತ್ತಾರೆ. ಒಟ್ಟಿನಲ್ಲಿ ನನಗೆ ಟಿಕೆಟ್ ಕೈ ತಪ್ಪಲು ಕಾಣದ ಕೈಗಳು ಕೈವಾಡ ಮಾಡಿವೆ. ನಾನು ಸ್ಪರ್ಧಿಸಿದ್ದರೆ 25 ಸಾವಿರ ಮತಗಳ ಅಂತರದಿಂದ ಜಯ ಗಳಿಸುತ್ತಿದ್ದೆ ಎಂದರು.

ಹರಿಹರ ಕ್ಷೇತ್ರದಲ್ಲಿ ನಾನು ಶಾಸಕನಾಗಿದ್ದ ವೇಳೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇನೆ. ಹಲವು ಸಮೀಕ್ಷೆಗಳೂ ಸಹ ನಾನು ಗೆಲ್ಲುವುದಾಗಿ ಹೇಳಿದ್ದವು. ಕಾಂಗ್ರೆಸ್ ಹೈಕಮಾಂಡ್ ಸಹ ನನಗೆ ಟಿಕೆಟ್ ನೀಡುವ ವಿಚಾರದಲ್ಲಿ ಮೈಮರೆತಂತೆ ಕಾಣುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ಸದಸ್ಯ ಬಿ.ರೇವಣಸಿದ್ದಪ್ಪ, ಜಿಲ್ಲಾ ವಕ್ತಾರ ಎಂ. ನಾಗೇಂದ್ರಪ್ಪ, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಮುರುಗೇಶಪ್ಪ, ಶಶಿರೆಡ್ಡಿ, ಜಿ. ಕೃಷ್ಣಮೂರ್ತಿ, ಅಬ್ದುಲ್, ರೆಹಮಾನ್ ಖಾನ್ ಗಣೇಶ್ ಮೆಹರ್ವಾಡೆ ಇತರರು ಉಪಸ್ಥಿತರಿದ್ದರು.

ಐಎಂಎ ಮಹಿಳಾ ವಿಭಾಗದಿಂದ ದಾದಿಯರ ದಿನ

ದಾವಣಗೆರೆ, ಮೇ 30- ಐ.ಎಂ.ಎ. ಮಹಿಳಾ ವಿಭಾಗದಿಂದ ದಾದಿಯರ ದಿನವನ್ನು ಆಚರಿಸಲಾಯಿತು. ನರ್ಸ್ ಶ್ರೀಮತಿ ವಿಶಾಲಾಕ್ಷಿ ಕುಮಾರಪ್ಪ ಮುಖ್ಯ ಅತಿಥಿಯಾಗಿ ಆಗಮಿಸಿ, ಅವರ ವೃತ್ತಿಯಲ್ಲಿನ ಅನುಭವಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಐ.ಎಂ.ಎ. ಮಹಿಳಾ ವಿಭಾಗದ ಉಪಾಧ್ಯಕ್ಷರಾದ ಶ್ರೀಮತಿ ತ್ರಿವೇಣಿ ಮಲ್ಲೇಶ್ ಮತ್ತು ಕಾರ್ಯದರ್ಶಿ ಶ್ರೀಮತಿ ಕವಿತಾ ರವಿಗೌಡ ಉಪಸ್ಥಿತರಿದ್ದರು.

ಶ್ರೀಮತಿ ಸುಧಾ ಸಿದ್ದೇಶ್, ಗೀತಾ ಶಾಂತಕುಮಾರ್, ಅನಿತ ಬಸವರಾಜು, ಯಶೋಧ ರಾಜಶೇಖರ್ ಮತ್ತು ರೇಖಾ ಸುದರ್ಶನ್ ಕಾರ್ಯಕ್ರಮ ನಡೆಸಿಕೊಟ್ಟರು.

ಗ್ರಾಹಕ ವ್ಯಾಜ್ಯಗಳ ಪರಿಹಾರ ನಾಳೆ ಫೋನ್-ಇನ್ ನೇರ ಪ್ರಸಾರ

ದಾವಣಗೆರೆ, ಮೇ 30- ಕರ್ನಾಟಕ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ವತಿಯಿಂದ ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಕುರಿತು ಗ್ರಾಹಕರ ಜಾಗೃತಿ ಮೂಡಿಸುವ ಸಲುವಾಗಿ ಜೂನ್ 1 ರಂದು ರಾತ್ರಿ 8 ರಿಂದ 8.30ರ ವರೆಗೆ ಆಕಾಶವಾಣಿ ಫೋನ್-ಇನ್ ನೇರ ಪ್ರಸಾರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಗ್ರಾಹಕರು ಯಾವುದೇ ಪ್ರಶ್ನೆಗಳಿದ್ದಲ್ಲಿ ದೂರವಾಣಿ 080-22370477 /22370488/22370499ಗೆ ನಿಗದಿಪಡಿಸಿದ ಸಮಯದಲ್ಲಿ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು ಅಥವಾ ಪ್ರಶ್ನೆಗಳನ್ನು HYPERLINK mailto:Consumergievences.queries@gmail.com" \t "_blank" Consumergievences.queries@gmail.com ಮೂಲಕ ಮೇ 31ರ ಒಳಗಾಗಿ ಕಳುಹಿಸಬೇಕೆಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ತಿಳಿಸಿದೆ.

ಶುಲ್ಕಕ್ಕಾಗಿ ಶಿಕ್ಷಣಕ್ಕೆ ಅಡ್ಡಿ ಬೇಡ : ಸಚಿವ

(1ನೇ ಪುಟದಿಂದ) ಯಾರೂ ಸಹ ಶಿಕ್ಷಣದ ಸೌಲಭ್ಯವನ್ನು ವಂಚಿಸುವಂತಿಲ್ಲ ಎಂದವರು ಹೇಳಿದ್ದಾರೆ.

ವಿದ್ಯಾರ್ಥಿ ವೇತನ ಸೂಕ್ತ ಕಾಲಕ್ಕೆ ದೊರೆಯುವಂತೆ ಮಾಡಲು ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಸೂಚನೆ ನೀಡಲಾಗುವುದು ಎಂದೂ ಅವರು ತಿಳಿಸಿದ್ದಾರೆ.

ಬಡ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡದೇ ತಮ್ಮದೇ ದುರಾಡಳಿತದಲ್ಲಿ ಮುಳುಗಿದ್ದ ಈ ಹಿಂದಿನ ಸರ್ಕಾರದ ಅರಾಜಕತೆಯನ್ನು ಖಂಡಿಸುತ್ತೇನೆ.

ಎಲ್ಲಾ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸೂಕ್ತ ಕಾಲಕ್ಕೆ ವಿದ್ಯಾರ್ಥಿ ವೇತನ ದೊರೆಯುವಂತೆ ಎಲ್ಲಾ ಅಧಿಕಾರಿಗಳಿಗೂ ಕಟ್ಟು ನಿಟ್ಟಿನ ಸೂಚನೆ ನೀಡಲಾಗುವುದು ಎಂದವರು ಹೇಳಿದ್ದಾರೆ.

ವಿದ್ಯಾರ್ಥಿ ವೇತನದ ವಿಷಯದಲ್ಲಿ ತೊಂದರೆ ಉಂಟು ಮಾಡಿದರೆ ಅದನ್ನು ವಿದ್ಯಾರ್ಥಿಗಳು ನನ್ನ ಗಮನಕ್ಕೆ ತನ್ನಿ ಎಂದು ಸಚಿವರು ತಿಳಿಸಿದ್ದಾರೆ.

ಅಂಗನವಾಡಿಗಳು ಪುನರಾರಂಭ

(1ನೇ ಪುಟದಿಂದ) ಕೇಂದ್ರದಲ್ಲಿ ಕೆಲಸ ಕಾರ್ಯಗಳು ಎಂದಿನಂತೆ ನಡೆಯುತ್ತಿವೆ. ಇಂದು ಶಾಲೆಯಲ್ಲಿ ಶಾರದಾ ಪೂಜೆಯೊಂದಿಗೆ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಪುಷ್ಪಗಳನ್ನು ನೀಡುವ ಮೂಲಕ ಆರತಿ ಮಾಡಲಾಯಿತು.

ಸೆಲ್ಫಿ ಪೋಟೋ ತೆಗೆದು ಸ್ವಾಗತಿಸಲಾಗಿದೆ ಮತ್ತು ಕೇಂದ್ರಗಳನ್ನು ಮಾವಿನ ಸೊಪ್ಪು, ಪುಷ್ಪಗಳಿಂದ ಶೃಂಗಾರ ಮಾಡಿ ಅಲಂಕಾರ ಮಾಡಲಾಗಿತ್ತು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಲಕ್ಷ್ಮೀ, ಜ್ಯೋತಿ, ಮಂಜುಳಾ, ಶೈಲಾ ಮೈದೂರು, ಅಂಗನವಾಡಿ ಶಿಕ್ಷಕರಾದ ಬೇಬಿ ಅಮರಾವತಿ, ಸುಧಾ ನಂದಿಗುಡಿ, ಲಲಿತಾ ಉಪಸ್ಥಿತರಿದ್ದರು.

ಆಯುಕ್ತರಾಗಿ ದಯಾನಂದ ನೇಮಕ

(1ನೇ ಪುಟದಿಂದ) ಬ್ಯಾಚ್‌ನ ಐಪಿಎಸ್ ಅಧಿಕಾರಿಯಾದ ದಯಾನಂದ ಅವರು ಸದ್ಯ ಗುಪ್ತಚರ ಇಲಾಖೆಯ ಮುಖ್ಯಸ್ಥರಾಗಿ ದ್ದಾರೆ. ಬೆಂಗಳೂರು ಪೊಲೀಸ್ ಆಯುಕ್ತರಾಗಿದ್ದ ಸಿ.ಎಚ್. ಪ್ರತಾಪ್ ರೆಡ್ಡಿ ಅವರನ್ನು ಆಂತರಿಕ ಭದ್ರತಾ ವಿಭಾಗದ ಡಿಜಿಪಿಯನ್ನಾಗಿ ನೇಮಿಸಲಾಗಿದೆ.

ಬೆಂಗಳೂರು ಸಂಚಾರ ದಟ್ಟಣೆಯನ್ನು ಸುಧಾರಿಸುವ ಸಲುವಾಗಿ ಎಡಿಜಿಪಿ ಮಟ್ಟದ ಅಧಿಕಾರಿಯಾದ ಡಾ. ಎಂ.ಎ. ಸಲೀಂ ಅವರಿಗೆ ಪದೋನ್ನತಿ ನೀಡಿ ವರ್ಗಾವಣೆ ಮಾಡಲಾಗಿದೆ. ಸಂಚಾರ ವಿಭಾಗದ ಎಡಿಜಿಪಿ ಆಗಿದ್ದ ಎಂ.ಎ. ಸಲೀಂ ಅವರನ್ನು ಡಿಜಿಪಿಯಾಗಿ ಪದೋನ್ನತಿ ನೀಡಲಾಗಿದೆ ಹಾಗೂ ಅವರನ್ನು ಅಪರಾಧ ತನಿಖಾ ಘಟಕ, ವಿಶೇಷ ಘಟಕಗಳು ಹಾಗೂ ಆರ್ಥಿಕ ಅಪರಾಧ ವಿಭಾಗದ ಡಿಜಿಪಿಯಾಗಿ ನೇಮಿಸಲಾಗಿದೆ.

ಈ ಸ್ಥಾನದಲ್ಲಿದ್ದ ಕೆ.ವಿ.ಶರತ್ ಚಂದ್ರ ಅವರನ್ನು ಬಿ.ದಯಾನಂದ ಅವರು ನಿರ್ವಹಣೆ ಮಾಡುತ್ತಿದ್ದ ಗುಪ್ತಚರ ಇಲಾಖೆ ಎಡಿಜಿಪಿಯಾಗಿ ನೇಮಕ ಮಾಡಲಾಗಿದೆ.

ಬಿ. ದಯಾನಂದ ಅವರು ಈ ಹಿಂದೆ ಅನೇಕ ಹುದ್ದೆಗಳನ್ನು ನಿಭಾಯಿಸಿದ್ದು, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮೂರೂ ಪಕ್ಷಗಳ ಆಡಳಿತದಲ್ಲೂ ಉತ್ತಮ ಸ್ಥಾನಗಳನ್ನು ನೀಡಲಾಗಿತ್ತು. ಎಲ್ಲರಿಗೂ ನಂಬಿಕಾರ್ಹ, ದಕ್ಷ ಅಧಿಕಾರಿ ಎನ್ನಿಸಿಕೊಂಡಿದ್ದಾರೆ. ಗೃಹ ಇಲಾಖೆಗೆ ಸೇರಿದ್ದರೂ ಗುಪ್ತ ಚರ ಇಲಾಖೆಯನ್ನು ಮುಖ್ಯಮಂತ್ರಿ ತಾವೇ ಇಟ್ಟುಕೊಳ್ಳುತ್ತಾರೆ.

ಈ ಇಲಾಖೆಗೆ ತಮ್ಮ ಅತ್ಯಂತ ನಂಬಿಕಾರ್ಹ ಅಧಿಕಾರಿಯನ್ನಷ್ಟೆ ನೇಮಿಸಿ ಕೊಳ್ಳಲಾಗುತ್ತದೆ. ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ ಹಾಗೂ ಹೆಚ್.ಡಿ. ಕುಮಾರಸ್ವಾಮಿಯವರ ಅವಧಿಯಲ್ಲಿ ಮೂವರು ಸಿಎಂಗಳಿಗೂ ಗುಪ್ತಚರ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಹೆಗ್ಗಳಿಕೆಯನ್ನು ದಯಾನಂದ ಹೊಂದಿದ್ದಾರೆ.

ನೋಟು ವಾಪಸ್ ಪಡೆಯಲು ರಿಸರ್ವ್ ಬ್ಯಾಂಕ್‌ಗೆ ಅಧಿಕಾರವಿಲ್ಲ : ಅರ್ಜಿ

ನವದೆಹಲಿ, ಮೇ 30 – 2,000 ರೂ.ಗಳ ನೋಟುಗಳನ್ನು ಚಲಾವಣೆಯಿಂದ ವಾಪಸ್ ಪಡೆಯಲು ರಿಸರ್ವ್ ಬ್ಯಾಂಕ್‌ಗೆ ಅಧಿಕಾರವಿಲ್ಲ ಎಂದು ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿದೆ. ರಜನೀಶ್ ಭಾಸ್ಕರ್ ಗುಪ್ತ ಎಂಬುವವರು ಅರ್ಜಿ ದಾಖಲಿಸಿದ್ದು, ಬ್ಯಾಂಕ್ ನೋಟುಗಳನ್ನು ವಾಪಸ್ ಪಡೆಯಲು ರಿಸರ್ವ್ ಬ್ಯಾಂಕ್‌ಗೆ ಯಾವುದೇ ಅಧಿಕಾರ ಇಲ್ಲ. ನೋಟುಗಳ ಅವಧಿ 4-5 ವರ್ಷ ಮಾತ್ರ ಎಂದು ರಿಸರ್ವ್ ಬ್ಯಾಂಕ್ ಹೇಗೆ ನಿರ್ಧರಿಸಿದೆ? ಎಂದಿದ್ದಾರೆ.

ಅಪಸ್ವರದ ನಡುವೆಯೂ ಗ್ಯಾರಂಟಿ ಅನುಷ್ಠಾನ

(1ನೇ ಪುಟದಿಂದ) ಈ ಗ್ಯಾರಂಟಿಗಳನ್ನು ಘೋಷಿಸುವಾಗ ಮೊದಲ ಸಚಿವ ಸಂಪುಟದಲ್ಲೇ ಜಾರಿ ಮಾಡಲಾಗುವುದು ಎಂದು ಭರವಸೆ ನೀಡಲಾಗಿತ್ತು.

ಸದ್ಯದ ಮಾಹಿತಿ ಪ್ರಕಾರ ಅನ್ನಭಾಗ್ಯದ ಯೋಜನೆಯನ್ನು 1.3 ಕೋಟಿ ಕುಟುಂಬಗಳು ಪ್ರಯೋಜನ ಪಡೆಯುತ್ತಿವೆ. ಈ ಕುಟುಂಬಗಳ 4.30 ಕೋಟಿ ಜನರಿಗೆ ತಲಾ ಹತ್ತು ಕೆ.ಜಿ ಅಕ್ಕಿ ವಿತರಿಸಬೇಕು. ಇದಕ್ಕೆ ವಾರ್ಷಿಕವಾಗಿ ತಗಲುವ ವೆಚ್ಚ 10 ಸಾವಿರ ಕೋಟಿ ರೂ. ಬೇಕು.

ಗೃಹಲಕ್ಷ್ಮಿ ಯೋಜನೆಯಡಿ ಬಿಪಿಎಲ್ ಕುಟುಂಬದ ಮನೆ ಒಡತಿಗೆ ಮಾಸಿಕ 2000 ರೂ ನೀಡುವುದರಿಂದ ವಾರ್ಷಿಕ 24 ಸಾವಿರ ಕೋಟಿ ಬೇಕಾಗುತ್ತದೆ ಎಂದು ಇಲಾಖೆ ವರದಿ ನೀಡಿದೆ.

ಯುವನಿಧಿ ಯೋಜನೆಗೆ ಈ ವರ್ಷ ಪದವಿ ಮುಗಿಸಿಕೊಂಡು ಹೊರಬಂದವರಿಗೆ ಸೀಮಿತವಾಗಿ ಯುವನಿಧಿ ಜಾರಿಗೆ ತಂದರೂ ವಾರ್ಷಿಕವಾಗಿ 1,200 ಕೋಟಿ ಬೇಕಾಗುತ್ತದೆ.

ಮಹಿಳೆಯರಿಗೆ ಉಚಿತ ಪ್ರಯಾಣದ ಯೋಜನೆಯನ್ನು ಅನುಷ್ಠಾನಕ್ಕೆ 600 ಕೋಟಿ ರೂ. ಅಗತ್ಯವಿದೆ.

ಗೃಹಜ್ಯೋತಿ ಯೋಜನೆಗೆ ಪ್ರತಿ ಮನೆಗೆ ತಿಂಗಳಿಗೆ 200 ಯೂನಿಟ್ ವಿದ್ಯುತ್ ಉಚಿತ ಕೊಡುವುದರಿಂದ ವಾರ್ಷಿಕ 12,038 ಕೋಟಿ ರೂ.ಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

ಕಳಪೆ ಕಾಮಗಾರಿಗಳ ತನಿಖೆ : ಶಾಸಕ ಶಾಂತನಗೌಡ

ಹೊನ್ನಾಳಿ

ಹೊನ್ನಾಳಿ, ಮೇ 30- ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದ ಕಳಪೆ ಕಾಮಗಾರಿಗಳನ್ನು ತನಿಖೆಗೆ ಒಳಪಡಿಸಲಾಗುವುದು ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇಲಾಖಾವಾರು ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಈಗಾಗಲೇ ನಡೆದಿರುವ ಕಾಮಗಾರಿಗಳ ಗುಣಮಟ್ಟ ಕಳಪೆ ಯಾಗಿರುವುದು ಕಂಡು ಬಂದಿದ್ದು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೊಂದಿಗೆ ಯಾವ ಯಾವ ಕಾಮಗಾರಿಗಳು ಮುಗಿದಿವೆ. ಯಾವ ಕಾಮಗಾರಿಗಳು ಅಪೂರ್ಣಗೊಂಡಿವೆ ಎಂಬ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಅಧಿಕಾರಿಗಳಿಂದ ಪಡೆಯುತ್ತಿದ್ದೇನೆ ಎಂದು ವಿವರಿಸಿದರು. ಚುನಾವಣೆ ಹತ್ತಿರ ಬರುತ್ತಿದ್ದಂತೆ ವಿವಿಧ ಇಲಾಖೆಗಳ ಸಾಕಷ್ಟು ಕಾಮಗಾರಿಗಳನ್ನು ಬೇಗನೆ ಮುಗಿಸಬೇಕೆಂಬ ಒತ್ತಡದಿಂದ ಅತ್ಯಂತ ಕಳಪೆ ಗುಣಮಟ್ಟದಿಂದ ಕೂಡಿರುವುದು ಗಮನಕ್ಕೆ ಬಂದಿದ್ದು ಇಂತಹ ಕಾಮಗಾರಿಗಳನ್ನು ಪರಿಶೀಲಿಸಿ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು. ಈಗಾಗಲೇ ಅಪೂರ್ಣಗೊಂಡಿರುವ ಕಾಮಗಾರಿಗಳ ವಿವರಗಳನ್ನು ಪಡೆದ ಶಾಸಕರು ಯಾವುದೇ ಲೋಪ-ದೋಷವಿಲ್ಲದೇ ಕೆಲಸ ನಿರ್ವಹಿಸಬೇಕೆಂದು ಎಚ್ಚರಿಸಿದರು.

ಈ ಹಿಂದೆ ನಾನು ಶಾಸಕನಾಗಿದ್ದಾಗ ನಡೆದ ಎಲ್ಲಾ ಕಾಮಗಾರಿಗಳು ಗುಣಮಟ್ಟದಿಂದ ಕೂಡಿದ್ದವು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆ, ಜಿಲ್ಲಾ ಪಂಚಾಯತ್ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.

ಬೆಳೆಗಳಿಗೆ ಜೈವಿಕ ಗೊಬ್ಬರಗಳಿಂದ ಬೀಜೋಪಚಾರ ಮಾಡಲು ಸಲಹೆ

ರೈತರಿಗೆ ಬಿ.ಓ. ಮಲ್ಲಿಕಾರ್ಜುನ್ ಸಲಹೆ

ದಾವಣಗೆರೆ, ಮೇ 30- ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಹಾಗೂ ಬಿದರಕೆರೆ ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ಸಹಯೋಗದಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಯ ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ತೊಗರಿಯ ಹೊರ ಆವರಣ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್ ಮಾತನಾಡುತ್ತಾ, ಮೆಕ್ಕೆಜೋಳವನ್ನು ಏಕ ಬೆಳೆ ಬೆಳೆಯುವುದರ ಬದಲು ಮಳೆಯಾಶ್ರಿತ ಪ್ರದೇಶಗಳಲ್ಲಿ ಅಂತರ ಬೆಳೆಯಾಗಿ ತೊಗರಿಯನ್ನು ಬೆಳೆಯುವುದು ಸೂಕ್ತ.

ತೊಗರಿಯಲ್ಲಿ ಮಧ್ಯಮ ಅವಧಿ ತಳಿಯನ್ನು ಬಿತ್ತನೆ ಮಾಡುವ ಸಂದರ್ಭದಲ್ಲಿ ರೈತ ಬಾಂಧವರು ಜೈವಿಕ ಗೊಬ್ಬರಗಳಾದ ಅಜಟೋಬ್ಯಾಕ್ಟರ್ 500 ಗ್ರಾಂ ಪ್ರತೀ ಎಕರೆ ಮೆಕ್ಕೆಜೋಳ ಬೀಜಕ್ಕೆ ಹಾಗೂ ರೈಸೋಬಿಯಂ, ರಂಜಕ ಕರಗಿಸುವ ಗೊಬ್ಬರ ತಲಾ 500 ಗ್ರಾಂ ಪ್ರತಿ ಎಕರೆ ತೊಗರಿ ಬೀಜಕ್ಕೆ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದರಿಂದ ಸಾರಜನಕ ಸ್ಥಿರೀಕರಣವಾಗುತ್ತದೆ. ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರ ವನ್ನು ಶೇಕಡ 20 ರಷ್ಟು ಕಡಿಮೆ ಮಾಡಬ ಹುದು ಎಂದರು. ಪ್ರಾತ್ಯಕ್ಷಿಕೆಯ ರೈತರಿಗೆ ತೊಗರಿ ಬೀಜ ಹಾಗೂ ಜೈವಿಕ ಗೊಬ್ಬರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಗಳೂರು ಕೃಷಿ ಇಲಾಖೆಯ ಅಧಿಕಾರಿ ಬೀರಪ್ಪ, ತೋಟಗಾರಿಕೆ ತಜ್ಞ ಎಂ.ಜಿ. ಬಸವನಗೌಡ, ಜಿಲ್ಲಾ ಯೋಜನಾ ಸಂಯೋಜಕ ಎನ್. ಆರ್. ಆಕಾಶ್, ಕಂಪನಿಯ ಅಧ್ಯಕ್ಷ ಮಂಜುನಾಥ್, ಪ್ರಗತಿಪರ ರೈತರು ಹಾಗೂ ಕಂಪನಿ ನಿರ್ದೇಶಕರು ಉಪಸ್ಥಿತರಿದ್ದರು.

ಬೈಕ್‌ನಲ್ಲಿ ಡ್ರಾಪ್ ಕೊಡುವುದಾಗಿ ಹೇಳಿ ಚಿನ್ನದ ಸರ ಕಿತ್ತುಕೊಂಡು ಪರಾರಿ

ದಾವಣಗೆರೆ, ಮೇ 30- ಬೈಕ್‌ನಲ್ಲಿ ಡ್ರಾಪ್ ಕೊಡುವುದಾಗಿ ಹೇಳಿ ವ್ಯಕ್ತಿಯೊಬ್ಬ ವೃದ್ಧೆಯ ಬಳಿ ಇದ್ದ ಬಂಗಾರದ ಸರ ಕಿತ್ತುಕೊಂಡು ಹೋದ ಘಟನೆ ಹರಿಹರ ತಾಲ್ಲೂಕು ಉಕ್ಕಡಗಾತ್ರಿ ಬಳಿಯ ನಿಟ್ಟುಪಳ್ಳಿ ಬಳಿ ನಡೆದಿದೆ.

ಹಳೇ ಹರಲಾಪುರದ ವಾಸಿ ಕಮಲಮ್ಮ (60) ಸಂಬಂಧಿಕರ ತೊಟ್ಟಿಲು ಕಾರ್ಯದಲ್ಲಿ ಪಾಲ್ಗೊಳ್ಳಲು ನಿಟ್ಟಪಳ್ಳಿ ಗ್ರಾಮಕ್ಕೆ ಹೋಗಲು ಹರಿಹರದಿಂದ ಉಕ್ಕಡಗಾತ್ರಿ ಗ್ರಾಮಕ್ಕೆ ಹೋಗಿದ್ದರು.

ಅಲ್ಲಿಂದ ನಿಟ್ಟಪಳ್ಳಿಗೆ ಹೋಗಲು ಉಕ್ಕಡಗಾತ್ರಿ ಗ್ರಾಮದ ಆಂಜನೇಯ ದೇವಸ್ಥಾನದ ಹತ್ತಿರ ಬಸ್‌ಗಾಗಿ ಕಾಯುತ್ತಿರಲು, ಯುವಕನೊಬ್ಬ ಬಂದು ತಾನು ಹೊಳೆ ಆನವೇರಿಗೆ ಹೋಗುವುದಾಗಿಯೂ, ಮಾರ್ಗಮಧ್ಯದಲ್ಲಿ ನಿಮ್ಮನ್ನು ನಿಟ್ಟಪಳ್ಳಿಗೆ ಬಿಟ್ಟು ಹೋಗುವುದಾಗಿ ಹೇಳಿದ್ದಾನೆ.

ಬೇಡ ತಾನು ಬಸ್ಸಿಗೆ ಹೋಗುವುದಾಗಿ ಮಹಿಳೆ ಹೇಳಿದ್ದರೂ, ಬಲವಂತ ಮಾಡಿದ್ದರಿಂದ ಮಹಿಳೆ ಒಲ್ಲದ ಮನಸ್ಸಿನಿಂದ ಬೈಕ್ ಹತ್ತಿದ್ದಾರೆ. 1 ಕಿ.ಮೀ. ದೂರ ಹೋದ ನಂತರ ಮೂತ್ರ ವಿಸರ್ಜನೆ ಮಾಡುವುದಾಗಿ ಹೇಳಿ ಬೈಕ್ ನಿಲ್ಲಿಸಿ, ಮಹಿಳೆಯ ಕೊರಳಲ್ಲಿದ್ದ ಬಂಗಾರದ ಸರ ಕಿತ್ತುಕೊಳ್ಳಲು ಯತ್ನಿಸಿದಾಗ ಮಹಿಳೆ ಸರ ಹಿಡಿದಿಕೊಂಡಿದ್ದರಿಂದ 11 ಗ್ರಾಂ ಸರದ ತುಂಡು ಮಹಿಳೆಯ ಕೈಯಲ್ಲಿಯೇ ಉಳಿದಿದ್ದು, ಉಳಿದ 1.45 ಲಕ್ಷ ರೂ. ಬೆಲೆಯ 34 ಗ್ರಾಂ. ತೂಕದ ಬಂಗಾರದ ಸರವನ್ನು ಯುವಕ ಕಿತ್ತುಕೊಂಡು ಪರಾರಿಯಾಗಿದ್ದಾನೆ. ಈ ಕುರಿತು ಕಮಲಮ್ಮ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಯಾವ ತನಿಖೆಗೂ ಸಿದ್ಧ



ಬೆಂಗಳೂರು, ಮೇ 30- ಹೊಸ ಸರ್ಕಾರ ಯಾವುದೇ ತನಿಖೆ ನಡೆಸಲಿ. ಎದುರಿಸಲು ನಾವು ಸಿದ್ದ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಗರಣ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ದೂರು ಇರಲಿ. ಯಾವುದೇ ತನಿಖೆ ಮಾಡಬಹುದು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಿಐಡಿ ತನಿಖೆ ಮಾಡಬಹುದು ಅಂತ. ನಾನೇ ಹಿಂದೆ ದೂರು ನೀಡಿದ್ದೆ. ಚುನಾವಣಾ ನೀತಿ ಸಂಹಿತೆ ಇದ್ದ ಹಿನ್ನೆಲೆಯಲ್ಲಿ ಎಫ್ಐಆರ್ ಆಗಿರಲಿಲ್ಲ ಎಂದರು.

ಹೊಸ ಸರ್ಕಾರ ಬಂದಿದೆ ಯಾವುದೇ ರೀತಿ ತನಿಖೆ ನಡೆಸಲಿ. ಎದುರಿಸಲು ನಾವು ಸಿದ್ದ. ತನಿಖೆ ಪಾರದರ್ಶಕವಾಗಿರಲಿ. ತನಿಖೆ ಕಾಮಗಾರಿಗೆ ಅಡ್ಡಿ ಆಗಬಾರದು. ಟಾರ್ಗೆಟ್ ಮಾಡಿ ಕಾಮಗಾರಿ ಬದಲಾವಣೆ ಮಾಡುವ ದುರುದ್ದೇಶ ಆಗಬಾರದು ಎಂದರು.

ಪಠ್ಯ ಪುಸ್ತಕ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಮಾಜಿ ಮುಖ್ಯಮಂತ್ರಿ, ನಮ್ಮ ಭಾರತದ ಸಂಸ್ಕೃತಿ, ಸಾಹಿತ್ಯ, ವಿಚಾರಗಳ ಆಧಾರದ ಮೇಲೆ ಕೆಲವು ಹೊಸದಾಗಿ ಪಠ್ಯಗಳನ್ನು ಪರಿಚಯ ಮಾಡಿದ್ದೆವು. ಅವರು ಅದೇ ಜಾಡನ್ನು ಹಿಡಿದು ಹೊಸ ಸಮಿತಿ ಮಾಡಲು ಹೊರಟಿದ್ದಾರೆ. ಇದಕ್ಕೆ ಸಮಾಜವೇ ಪ್ರತಿಕ್ರಿಯೆ ನೀಡಲಿದೆ. ಮಕ್ಕಳಿಗೆ ಶಿಕ್ಷಣ ನೀಡುವ ಬಗ್ಗೆ ಪೋಷಕರು ಗಮನಿಸುತ್ತಿದ್ದಾರೆ. ಪಠ್ಯ ಪದೇ ಪದೇ ಬದಲಾವಣೆಯಿಂದ ಮಕ್ಕಳಿಗೆ ಸಮಸ್ಯೆ ಆಗಬಾರದು. ಜವಾಬ್ದಾರಿಯುತ ಸರ್ಕಾರ ಏನು ಮಾಡಲಿದೆ ನೋಡೋಣ ಎಂದರು. ಎನ್.ಇ.ಪಿ ಮೂಲಕ ಈಗ ಮಕ್ಕಳು ಅಧ್ಯಯನ ಶುರು ಮಾಡಿದ್ದಾರೆ. ಎನ್.ಇ.ಪಿ ಮಾಡುವಾಗಲೇ ಸಮಿತಿ ಮಾಡಿ, ರಾಜ್ಯದ ಅಭಿಪ್ರಾಯ ತೆಗೆದುಕೊಳ್ಳಲಾಗಿದೆ. ಎಲ್ಲಾ ತಜ್ಞರ ಅಭಿಪ್ರಾಯ ಪಡೆದು ಎನ್.ಇ.ಪಿ ಜಾರಿಗೆ ತರಲಾಗಿದೆ ಎಂದರು.

ನಮಗೆ ಆಹಾರ ಬೇಕು, ತಂಬಾಕು ಅಲ್ಲ... ವಿಶ್ವ ತಂಬಾಕು ರಹಿತ ದಿನ

2023 ರ ವಿಶ್ವ ತಂಬಾಕು ರಹಿತ ದಿನದ ಮೂಲ ಘೋಷ ವಾಕ್ಯ "ನಮಗೆ ಆಹಾರ ಬೇಕು, ತಂಬಾಕು ಅಲ್ಲ". ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ನಮಗೆ ಆಹಾರ ಬೇಕೇ ವಿನಃ ತಂಬಾಕು ಅಲ್ಲ ಎಂಬ ಕಟು ಸತ್ಯವನ್ನು ವಿಶ್ವದ ಜನತೆ ಅರ್ಥ ಮಾಡಿಕೊಳ್ಳಬೇಕು. ಪ್ರಸ್ತುತ ಸನ್ನಿವೇಶದಲ್ಲಿ ಆರೋಗ್ಯ ಸಂಪಾದನೆಗೆ ಪ್ರಥಮ ಆದ್ಯತೆ ನೀಡಬೇಕೇ ಹೊರತು, ಇತರೆ ಯಾವುದೇ ದುಶ್ಚಟಗಳಿಗಲ್ಲ. ಯಾರೊಬ್ಬರೂ ದುಶ್ಚಟಗಳ ದಾಸನಾಗ ಬಾರದು. ಧೂಮಪಾನ ಆರೋಗ್ಯಕ್ಕೆ ಹಾನಿಕರ ಎಂದು ತಿಳಿದಿದ್ದರೂ ಕೂಡ ಅದರ ಸೇವನೆ ಮಾಡುವವರೇ ಹೆಚ್ಚು.

ತಂಬಾಕು ಉತ್ಪನ್ನಗಳಾದ ಬೀಡಿ, ಸಿಗರೇಟ್, ಹೊಗೆಸೊಪ್ಪು, ಗುಟ್ಕಾ, ಹುಕ್ಕಾ ಹಾಗೂ ಇನ್ನು ಮುಂತಾದವುಗಳು ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರುತ್ತವೆಂಬ ಸ್ಪಷ್ಟ ಅರಿವಿದ್ದರೂ ಅವುಗಳನ್ನು ಬಿಡಲಾರದೇ ಇರುವವರು ಅತಿ ವಿರಳ. ಅನೇಕ ಜನ ಒತ್ತಡವನ್ನು ನಿಯಂತ್ರಿಸಿಕೊಳ್ಳಲು, ಇತರರೊಂದಿಗೆ ಸಂತೋಷ ಹಾಗೂ ದುಃಖ ಹಂಚಿಕೊಳ್ಳಲು, ಮತ್ತೆ ಕೆಲವರು ತಮ್ಮ ಘನತೆಯನ್ನು ಎತ್ತಿ ತೋರಿಸಲು, ಇನ್ನೂ ಕೆಲವರು ಫ್ಯಾಷನ್‌ಗಾಗಿ ತಂಬಾಕು ಸೇವನೆ ಮಾಡುವರು. ಅದರಲ್ಲೂ ಕೆಲವರು ಊಟ, ನಿದ್ರೆ ಬಿಟ್ರು ಬಿಟ್ಟೇನು ಇವುಗಳನ್ನು ಬಿಡುವುದಿಲ್ಲವೆನ್ನುವವರೂ ಇದ್ದಾರೆ. ಇಂತಹವರ ಮನಸ್ಸುಗಳನ್ನು ಸ್ವಲ್ಪ ಮಟ್ಟಿಗಾದರೂ ಬದಲಾಯಿಸಲು, ಇದರ ಬಳಕೆಯ ವಿರುದ್ಧ ಹೋರಾಡಲು, ಅತಿ ಹೆಚ್ಚು ತಂಬಾಕು ಸೇವಿಸುವುದರಿಂದ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಹಾಗೂ ತಿಳಿವಳಿಕೆ ಮೂಡಿಸುವ ಸಲುವಾಗಿ ಈ ದಿನವನ್ನು ಆಚರಿಸುವ ಪರಿಪಾಠ 1988 ರಿಂದ ವಿಶ್ವ ಆರೋಗ್ಯ ಸಂಸ್ಥೆಯ ನಿರ್ದೇಶನದ ಮೇರೆಗೆ ಜಾರಿಗೆ ಬಂದಿತು .



ವಿಶ್ವದಾದ್ಯಂತ ತಂಬಾಕು ಉತ್ಪನ್ನಗಳಿಂದ ಪ್ರತಿ ವರ್ಷ 8 ದಶಲಕ್ಷಕ್ಕಿಂತ ಹೆಚ್ಚು ಜನ ಸಾವಿಗೀಡಾಗುತ್ತಿದ್ದು,1.8 ಮಿಲಿಯನ್ ನಷ್ಟು ಜನ ಶ್ವಾಸಕೋಶದ ಕ್ಯಾನ್ಸರ್‌ನಿಂದ ಸಾವಿಗೀಡಾಗುತ್ತಿರು ವರು. ಚೀನಾ ಹೊರತುಪಡಿಸಿದರೆ ಭಾರತದಲ್ಲಿ ಅತೀ ಹೆಚ್ಚು ತಂಬಾಕು ಉತ್ಪನ್ನಗಳನ್ನು ಬೆಳೆಯಲಾಗುತ್ತಿದೆ, ಅಷ್ಟೇ ಅಲ್ಲದೆ, ನಮ್ಮ ದೇಶದಲ್ಲಿ 267 ಮಿಲಿಯನ್ ಯುವಕರು ತಂಬಾಕು ಸೇವನೆಯ ದಾಸರಾಗಿದ್ದಾರೆ.

ತಂಬಾಕು ಉತ್ಪನ್ನಗಳು ಪರಿಸರದ ಮೇಲೆ ಬೀರುವ ಕೆಟ್ಟ ಪರಿಣಾಮಗಳೆಂದರೆ :

* ತಂಬಾಕು ಬೆಳೆಗೆ ಹೆಚ್ಚಿನ ಕೀಟನಾಶಕ ಹಾಗೂ ಗೊಬ್ಬರ ಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ. * ತಂಬಾಕು ಬೆಳೆದ ಜಾಗದಲ್ಲಿ ಬೇರೆ ಬೆಳೆ ತೆಗೆಯುವುದು ಕಷ್ಟವಾಗುತ್ತದೆ. * ಪ್ರತಿ 300 ಸಿಗರೇಟ್ ತಯಾರಿಕೆಗೆ ಒಂದು ಮರವನ್ನು ಕಡಿಯಲಾಗುತ್ತದೆ. * ತಂಬಾಕು ಬೆಳೆಗೆ ಹೆಚ್ಚಿನ ನೀರು ಪೋಲಾಗುತ್ತದೆ. * ಜಾಗತಿಕವಾಗಿ ಪ್ರತಿ ವರ್ಷ ಸುಮಾರು 35 ಲಕ್ಷ ಹೆಕ್ಟೇರ್ ಭೂಮಿ ನಾಶವಾಗುತ್ತದೆ. * ಈ ಕೃಷಿಯು ವಾರ್ಷಿಕವಾಗಿ 84 ಮೆಗಾಟನ್ CO_2 ಹೊರಸೂಸುವಿಕೆಯನ್ನು ಉತ್ಪಾದಿಸುತ್ತದೆ. ಹೀಗಿದ್ದರೂ ಅದನ್ನು ಬೆಳೆಯುವವರ ಸಂಖ್ಯೆ ಏನೂ ಕಡಿಮೆಯಾಗಿಲ್ಲ.

ತಂಬಾಕು ಸೇವನೆಯಿಂದ ಉಂಟಾಗುವ ಪರಿಣಾಮಗಳು :

ತಂಬಾಕು ಸೇವನೆಯಿಂದ ಶ್ವಾಸಕೋಶ, ಧ್ವನಿ ಪೆಟ್ಟಿಗೆ, ಬಾಯಿ ಹಾಗೂ ಗಂಟಲಿನ ಕ್ಯಾನ್ಸರ್ ಅಲ್ಲದೆ ಮೂತ್ರಪಿಂಡ, ಯಕೃತ್, ಮೇದೋಜ್ಜೀರಕ ಗ್ರಂಥಿ, ಹೃದಯದ ಮೇಲೆ ಪರಿಣಾಮ ಬೀರುವುದಲ್ಲದೆ, ಪಾರ್ಶ್ವವಾಯು, ದೃಷ್ಟಿ ಮಾಂದ್ಯತೆ, ಕಿವುಡುತನ, ಬಾಯಿಯ ದುರ್ವಾಸನೆ, ಶಕ್ತಿಹೀನತೆ, ಹಲ್ಲಿನ ತೊಂದರೆಯ ಜೊತೆಗೆ ಸಂತಾನೋತ್ಪತ್ತಿಯ ಮೇಲೆ ಪರಿಣಾಮ ಬೀರುವುದರ ಜೊತೆಗೆ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುವುದು ಹಾಗೂ ಮಾನಸಿಕ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುವುದು. ಒಂದು ಅಂದಾಜಿನ ಪ್ರಕಾರ ಒಮ್ಮೆ ಸಿಗರೇಟ್ ಸೇದುವುದರಿಂದ ನಮ್ಮ ಜೀವನದ ಹನ್ನೊಂದು ನಿಮಿಷಗಳಷ್ಟು ಅಮೂಲ್ಯ ಆಯುಷ್ಯವನ್ನು ಕಳೆದುಕೊಳ್ಳುತ್ತೇವೆ.

ವಿಶ್ವದಲ್ಲಿ ನೌರು (52.1%) ತಂಬಾಕು ಸೇವನೆಯಲ್ಲಿ ಪ್ರಥಮ ಸ್ಥಾನ ಗಳಿಸಿದರೆ, ಘಾನಾ (3.7%) ದೇಶ ಕನಿಷ್ಠ ಸ್ಥಾನವನ್ನು ಪಡೆದಿದೆ. ಭಾರತದಲ್ಲಿ ಶೇ.27 ರಷ್ಟು ಜನ ತಂಬಾಕು ಸೇವಿಸುತ್ತಿದ್ದು, ವಾರ್ಷಿಕವಾಗಿ ಇದರಿಂದ 1.35 ಮಿಲಿಯನ್ ಜನ ಸಾವಿಗೀಡಾಗುತ್ತಿರುವರು. ಅಲ್ಲದೆ ದೇಶದಲ್ಲಿ ಪ್ರತಿ ಎರಡು ನಿಮಿಷಕ್ಕೆ ಮೂರು ಜನ ತಂಬಾಕು ಸೇವನೆಯಿಂದ ಮರಣ ಹೊಂದುತ್ತಿರುವರು. ಇದಲ್ಲದೆ Second hand smokers ಗಳ ಸಾವಿನ ಸಂಖ್ಯೆಯಲ್ಲಿಯೂ ಹೆಚ್ಚಳವನ್ನು ಕಾಣಬಹುದು. ದೇಶದ ಛತ್ತೀಸ್‌ಘಡದಲ್ಲಿ ಅತಿ ಹೆಚ್ಚು ಅಂದರೆ ಶೇ.39.1 ರಷ್ಟು ಮಂದಿ ತಂಬಾಕು ಸೇವಿಸಿದರೆ, ಕೊಲ್ಕೋತ್ತಾ smoke city ಎಂಬ ಹೆಸರಿಗೆ ಖ್ಯಾತವಾಗಿದೆ. ಹಿಮಾಚಲ ಪ್ರದೇಶವು ದೇಶದ ಮೊದಲ ತಂಬಾಕು ಮುಕ್ತ ರಾಜ್ಯವೆಂದು ಹೆಸರು ಗಳಿಸಿದರೆ, ಮಿಜೋರಾಮ್ ನಲ್ಲಿ ಧೂಮಪಾನ ಮಾಡುವಲ್ಲಿ ಪುರುಷರಿಗಿಂತ ಮಹಿಳೆಯರೇ ಮುಂದೆ (16.1%) ಇರುವರೆಂಬುದು ತಿಳಿದುಬಂದಿದೆ.

ತಂಬಾಕು ತ್ಯಜಿಸುವುದರಿಂದ ಆಗುವ ಅನುಕೂಲಗಳು :

* ಆರೋಗ್ಯ ಮತ್ತು ಜೀವನದ ಗುಣಮಟ್ಟದಲ್ಲಿ ಸುಧಾರಣೆ * ಹತ್ತು ವರ್ಷದಷ್ಟು ಸಾವನ್ನು ಮುಂದೂಡಬಹುದು. * ಕಳಪೆ ಸಂತಾನೋತ್ಪತ್ತಿಯನ್ನು ದೂರ ಮಾಡುವುದು * ಆರ್ಥಿಕ ಹೊರೆಯನ್ನು ತಗ್ಗಿಸುವುದು. * ಉಸಿರಾಟದ ಸೋಂಕುಗಳನ್ನು ಕಡಿಮೆ ಮಾಡುವುದು. * ಶ್ವಾಸಕೋಶದ ಕಾರ್ಯನಿರ್ವಹಣೆಯನ್ನು ಸುಧಾರಿಸುವುದು. * ಪಾರ್ಶ್ವ ವಾಯುವಿನಿಂದ ಉಂಟಾಗುವ ಸಾವಿನ ಸಂಖ್ಯೆಯನ್ನು ಕಡಿಮೆ ಮಾಡುವುದು. ಪ್ರತಿ ವರ್ಷ ಮೇ 31 ರಂದು ಮಾತ್ರ ತಂಬಾಕು ರಹಿತ ದಿನ ಆಚರಿಸದೆ, ವರ್ಷದ ಎಲ್ಲಾ ದಿನಗಳಂದು ಈ ದಿನವನ್ನು ಆಚರಿಸಿದಲ್ಲಿ ಸದೃಢ ಹಾಗೂ ಆರೋಗ್ಯಯುತ ಸಮಾಜ ವನ್ನು ನಿರ್ಮಾಣ ಮಾಡಲು ಸಾಧ್ಯ. ಎಲ್ಲಾ ವಯಸ್ಸಿನ ವ್ಯಕ್ತಿಗಳು ನಾನು ಇಂದಿನಿಂದ ಯಾವುದೇ ತಂಬಾಕು ಉತ್ಪನ್ನಗಳನ್ನು ಸೇವಿಸುವುದಿಲ್ಲವೆಂಬ ಪ್ರತಿಜ್ಞೆ ಕೈಗೊಂಡಲ್ಲಿ ಮಾತ್ರ ತಂಬಾಕು ಮುಕ್ತ ಸಮಾಜವನ್ನು ನಿರ್ಮಿಸ ಬಹುದು. ಅದರಂತೆ ಧೂಮಪಾನ ಮಾಡುವವರ ಮನವೊಲಿಸಲು ತಂಬಾಕು ವ್ಯಸನ ಮುಕ್ತ ಕೇಂದ್ರಗಳನ್ನು ಸ್ಥಾಪಿಸಿ ತನ್ಮೂಲಕ ಅವರಿಗೆ ತರಬೇತಿ ಕೊಡು ವಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ನಡೆಯಬೇಕು. ಬನ್ನಿ ನಾವೆಲ್ಲರೂ ತಂಬಾಕು ರಹಿತ ಮನೆ, ಸಮಾಜ ಹಾಗೂ ಸಮುದಾಯವನ್ನು ನಿರ್ಮಾಣ ಮಾಡೋಣ. ನಾನು ತಂಬಾಕು ಬಳಕೆ ಮಾಡುವುದಿಲ್ಲ, ಬೇರೆಯವರಿಗೂ ಬಳಕೆ ಮಾಡಲು ಬಿಡುವುದಿಲ್ಲವೆಂಬ ಒಗ್ಗಟ್ಟಿನ ಮಂತ್ರವನ್ನು ಜಪಿಸೋಣ.

- ಡಾ. ಶಿವಯ್ಯ ಎಸ್
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ.

ಇಂಧನ ತೆರಿಗೆಯಿಂದ ಲಾಭಕೋರತನ : ಚಿದಂಬರಂ

ನವದೆಹಲಿ, ಮೇ 30 – ಇಂಧನದ ಮೇಲೆ ಹೆಚ್ಚು ತೆರಿಗೆ ಹೇರುವ ಮೂಲಕ ಕೇಂದ್ರ ಸರ್ಕಾರ ಲಾಭಕೋರತನದಲ್ಲಿ ತೊಡಗಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಪಿ. ಚಿದಂಬರಂ ಆರೋಪಿಸಿದ್ದಾರೆ.

2014ರಿಂದ 2021ರ ನಡುವೆ ಕಚ್ಚಾ ತೈಲದ ಬೆಲೆಗಳು 60 ಡಾಲರ್‌ಗಿಂತ ಕಡಿಮೆ ಇತ್ತು. 2022ರ ಫೆಬ್ರವರಿಯಲ್ಲಿ ಉಕ್ರೇನ್ ಮೇಲೆ ದಾಳಿ ನಡೆದಾಗ ತೈಲ ಬೆಲೆ ಹೆಚ್ಚಾಯಿತು. ನಂತರದಲ್ಲಿ ತೈಲ ಬೆಲೆ 75 ಡಾಲರ್‌ಗಳಿಗಿಂತ ಕಡಿಮೆಯಾಗಿದೆ. ಆದರೂ ಇದರ ಲಾಭವನ್ನು ಜನರಿಗೆ ಕೊಡುತ್ತಿಲ್ಲ ಎಂದು ಚಿದಂಬರಂ ಟೀಕಿಸಿದ್ದಾರೆ.

ಹೆಚ್ಚಿನ ತೆರಿಗೆ ಮೂಲಕ ಸರ್ಕಾರ ಲಾಭಕೋರತನದಲ್ಲಿ ತೊಡಗಿದೆ. ತೆರಿಗೆಗಳಿಂದ ಜನರು ಸಂಕಷ್ಟ ಎದುರಿಸುತ್ತಿದ್ದಾರೆ ಎಂದವರು ಹೇಳಿದ್ದಾರೆ.

ಕೃತಕವಾಗಿ ಹಣದುಬ್ಬರ ಹೆಚ್ಚಿನ ಮಟ್ಟದಲ್ಲಿರಿಸಿರುವ ಕಾರಣದಿಂದಲೂ ಹಣದುಬ್ಬರವಾಗುತ್ತಿದೆ ಎಂದವರು ಹೇಳಿದ್ದಾರೆ.

ಸೈಬರ್ ಸೆಕ್ಯೂರಿಟಿ ವಿವಿಧ ಕೋರ್ಸ್‌ಗಳ ತರಬೇತಿಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಮೇ 30- ನ್ಯಾಷನಲ್ ಅಕಾಡೆಮಿ ಆಫ್ ಸೈಬರ್ ಸೆಕ್ಯುರಿಟಿ (ಎನ್.ಎ.ಸಿ.ಎಸ್) ವತಿಯಿಂದ ಆನ್‌ಲೈನ್ ಸೈಬರ್ ಸೆಕ್ಯೂರಿಟಿ ವಿವಿಧ ಕೋರ್ಸ್‌ಗಳ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿ ಪಾಸ್, ಐಟಿಐ, ಪದವಿ, ಎಂಜಿನಿಯರಿಂಗ್, ಪಾಲಿಟೆಕ್ನಿಕ್ ಡಿಪ್ಲೋಮಾ ಆಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ವೆಬ್ www.nac-sindia.org ಮೂಲಕ ಅರ್ಜಿ ಸಲ್ಲಿಸಲು ಬರುವ ಜೂನ್ 9 ಕೊನೆ ದಿನ. ಹೆಚ್ಚಿನ ವಿವರಕ್ಕೆ ಸಂಪರ್ಕಿಸಿ:7893141797.

ಅತ್ತೆಗೇ ಹಣ ಗ್ಯಾರಂಟಿ : ಹೆಬ್ಬಾಳ್ಕರ್

ಬೆಳಗಾವಿ, ಮೇ 30 - ಕಾಂಗ್ರೆಸ್ ನೀಡಿದ್ದ ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆ ಅನ್ವಯ ಮನೆಯ ಅತ್ತೆಯರಿಗೆ 2,000 ರೂ. ಸಿಗಲಿದೆ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಇಂಗಿತ ವ್ಯಕ್ತಪಡಿಸಿದ್ದಾರೆ.

ಅವಿಭಕ್ತ ಕುಟುಂಬಗಳಲ್ಲಿ ಅತ್ತೆ ಹಾಗೂ ಸೊಸೆಯರಲ್ಲಿ ಯಾರಿಗೆ ಹಣ ನೀಡಲಾಗುತ್ತದೆ ಎಂಬ ಪ್ರಶ್ನೆ ಇತ್ತು. ಈ ಬಗ್ಗೆ ಉತ್ತರಿಸಿರುವ ಹೆಬ್ಬಾಳ್ಕರ್, ನಮ್ಮ ಸಂಪ್ರದಾಯದ ಪ್ರಕಾರ ಮನೆಯ ಒಡತಿ ಅತ್ತೆ ಆಗುತ್ತಾರೆ. ಹೀಗಾಗಿ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಅತ್ತೆಗೆ ನೀಡುತ್ತೇವೆ ಎಂದರು. ನಾಳೆ ಈ ಬಗ್ಗೆ ಅಧಿಕಾರಿಗಳ ಜತೆ ಸಭೆ ನಡೆಸಿ ಅನುಷ್ಠಾನದ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತದೆ ಎಂದರು. ಈ ಮೂಲಕ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪರೋಕ್ಷವಾಗಿ ಗೃಹಲಕ್ಷ್ಮಿ ಯೋಜನೆ ಸೊಸೆಗೆ ಸಿಗುವುದಿಲ್ಲ ಎನ್ನುವ ಸುಳಿವು ನೀಡಿದ್ದಾರೆ.

ನೆಪ ಹೇಳದೆ ಗ್ಯಾರಂಟಿಗಳನ್ನು ಜಾರಿ ಮಾಡಿ

ಬೆಂಗಳೂರು, ಮೇ 30- ಭರವಸೆ ನೀಡಿದ್ದೀರಿ, ಗೆದ್ದು ಅಧಿಕಾರ ಹಿಡಿದಿದ್ದೀರಿ. ಐದು ಗ್ಯಾರಂಟಿ ಜಾರಿ ಮಾಡುವುದು ನಿಮ್ಮ ಜವಾಬ್ದಾರಿ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಚಾಟಿ ಬೀಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ನೆಪ ಹೇಳದೆ ಗ್ಯಾರಂಟಿಗಳನ್ನು ಜಾರಿ ಮಾಡಿ ಎಂದು ಒತ್ತಾಯ ಮಾಡಿದ್ದಾರೆ.

ಕಾಂಗ್ರೆಸ್‌ಗೆ 135 ಸೀಟು ಕೊಟ್ಟ ಜನತೆಯ 'ಗ್ಯಾರಂಟಿ ಬೇಡಿಕೆ'ಯಲ್ಲಿ ನ್ಯಾಯವಿದೆ. 5 ಗ್ಯಾರಂಟಿ ಜಾರಿ ರಾಜ್ಯ ಕಾಂಗ್ರೆಸ್ ಸರ್ಕಾರದ ಜವಾಬ್ದಾರಿ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಆಗುವುದಕ್ಕೆ ಮುನ್ನ ಸಿದ್ದರಾ ಮಯ್ಯ, ಡಿ.ಕೆ. ಶಿವಕುಮಾರ್ ಅವರೇ ಸಹಿ ಮಾಡಿಕೊಟ್ಟ ಕಾರ್ಡುಗಳು ಜನರ ಬಳಿ ಇವೆ. ಆ ಗ್ಯಾರಂಟಿಗಳಿಗೆ ಗ್ಯಾರಂಟಿಯೇ ಇಲ್ಲವೇ? ಎಂದು ಅವರು ಪ್ರಶ್ನಿಸಿದ್ದಾರೆ.

ದಿನನಿತ್ಯವೂ ಗ್ಯಾರಂಟಿ ಗಳ ಬಗ್ಗೆ ಜನರಲ್ಲಿ ನಿರೀಕ್ಷೆಯೂ ಮೇರೆ ಮೀರುತ್ತಿದೆ, ಆಕ್ರೋಶವೂ ಹೆಚ್ಚುತ್ತಿದೆ. ಜನಾಕ್ರೋಶಕ್ಕೆ ಸಬೂಬು ಸರಿಯಲ್ಲ. ಏಕೆಂದರೆ, ನಿರೀಕ್ಷೆ ಮೂಡಿಸಿದ್ದು ಇವರೇ. ಈಗ ಷರತ್ತು ನೆಪದಲ್ಲಿ ಜನರನ್ನು ಸತಾಯಿಸುವುದು ನ್ಯಾಯವಲ್ಲ. ಗ್ಯಾರಂಟಿಗಳ ಬಗ್ಗೆ ಮಾಧ್ಯಮಗಳಲ್ಲಿ ಅಬ್ಬರಿಸಿದ ಇವರೇ, ಈಗ ಮೀನಾಮೇಷ ಎಂದರೆ ಜನ ಒಪ್ಪುವರೇ ಎಂದು ಮಾಜಿ ಮುಖ್ಯಮಂತ್ರಿ ಅವರು ಕೇಳಿದ್ದಾರೆ.

ನನಗೂ ಫ್ರೀ, ನಿನಗೂ ಫ್ರೀ, ಸರ್ವರಿಗೂ ಫ್ರೀ ಎಂದ ಮುಖ್ಯಮಂತ್ರಿಗಳಿಗೆ ಈಗ ಗ್ಯಾರಂಟಿಗಳ ಬಗ್ಗೆ ದಿವ್ಯ ಮೌನವೇಕೆ? ಅವರ ಅಕ್ಕಪಕ್ಕದವರ ಹೇಳಿಕೆಗಳನ್ನು ಜನರು ನಂಬುತ್ತಿಲ್ಲ. ಮುಖ್ಯಮಂತ್ರಿಗಳೇ ಜನರಿಗೆ ನೇರವಾಗಿ ಹೇಳಲಿ, ಜನರಲ್ಲಿ ವಿಶ್ವಾಸ ಮೂಡಿಸಲಿ. ಮಾಧ್ಯಮಗಳಲ್ಲಿ ಕಾಂಗ್ರೆಸ್ ಕೊಟ್ಟ 'ಗ್ಯಾರಂಟಿ ಜಾಹೀರಾತು'ಗಳೂ ಇನ್ನೂ ಜನಮಾನಸದಿಂದ ಮಾಸಿಲ್ಲ. ಅದೇ ರೀತಿ ಸ್ವತಃ ಮುಖ್ಯಮಂತ್ರಿಗಳೇ ಜೂನ್ 1ಕ್ಕೆ ಜಾರಿ ಮಾಡುವ ಬಗ್ಗೆ ಜಾಹೀರಾತು ನೀಡಿ ಜನರಿಗೆ ಖಾತರಿ ಕೊಡಲಿ. ವಿಳಂಬದಿಂದ ಸರ್ಕಾರದ ವಿಶ್ವಾಸಾರ್ಹತೆಗೆ ಪೆಟ್ಟು ಬೀಳುವುದೇ ಹೆಚ್ಚು. ಜನರಿಗೆ ಅಭದ್ರತೆಯ ಗ್ಯಾರಂಟಿ ಬೇಡವೇ ಬೇಡ ಎಂದು ಅವರು ಹೇಳಿದ್ದಾರೆ.

ಅದು ಬಿಟ್ಟು 'ಕೆಲ ಸಚಿವರು, ಶಾಸಕ'ರನ್ನು ನನ್ನ ಮೇಲೆ ಛೂ ಬಿಟ್ಟರೆ ಪ್ರಯೋಜನವಿಲ್ಲ. ಅಂಥ ರಾಜಕಾರಣ ಉಪಯೋಗವೂ ಇಲ್ಲ. ಗ್ಯಾರಂಟಿಗಳ ಬಗ್ಗೆ ಜನಕ್ಕೆ ಬೆಟ್ಟದಷ್ಟು ನಿರೀಕ್ಷೆ ಇದೆ. ಜಾರಿ ಮಾಡಿ, ಅದರ ಹೊರತಾಗಿ ಈ ಭರವಸೆಗಳೇ ಅಗಮ್ಯಗೋಚರವಾಗಿ ಗಮ್ಯವೇ ಇಲ್ಲದ ಆಡಳಿತ ಕೊಡುವುದು ಬೇಡ. ಇಷ್ಟೇ ನನ್ನ ಕಾಳಜಿ ಎಂದಿದ್ದಾರೆ.

ಬಿಲ್ಡಿಂಗ್ ಬಾಡಿಗೆಗಿದೆ
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ.: 98453 17181

ಕೆಲಸಕ್ಕೆ ಬೇಕಾಗಿದ್ದಾರೆ
ನಿರ್ವಾನ್ಸ್ ಕೆಫೆ'ಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 28 ವಿದ್ಯಾರ್ಹತೆ - ಎಸ್.ಎಸ್.ಎಲ್.ಸಿ , ಪಿ.ಯು.ಸಿ , ಪಾಸ್ / ಫೇಲ್ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಆಂಜನೇಯ ಬಡಾವಣೆ ನೇತ್ರಾವತಿ ಹಾಸ್ಟೆಲ್ ರೋಡ್ ದಾವಣಗೆರೆ. 93804 69079, 84969 71882

ಬೇಕಾಗಿದ್ದಾರೆ
ಅಬಾಕಸ್ ಮತ್ತು ವೇದಿಕ್ ಮ್ಯಾಥ್ಸ್ ಕಲಿಸಲು ಶಿಕ್ಷಕರು ಬೇಕಾಗಿದ್ದಾರೆ. ಸಂಪರ್ಕಿಸಿ : 90364 27272

ಬೇಕಾಗಿದ್ದಾರೆ
ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ವೆಂಡರ್ ಮತ್ತು ಸಪ್ಲೈಯರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ : 98442 99666, 98441 99966

ಹಾಲ್ ಬಾಡಿಗೆಗೆ ಇದೆ
ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಶಿಲ್ಪ ಡಯಾಗ್ನಸ್ಟಿಕ್ಸ್ ಪಕ್ಕದಲ್ಲಿರುವ ಶ್ವೇತ ಬಿಲ್ಡಿಂಗ್‌ನ ಮೊದಲನೇ ಮಹಡಿಯಲ್ಲಿ ಹಾಲ್ ಬಾಡಿಗೆಗೆ ಇದೆ. 98440 65638

ವಾಸದ ಮನೆ ಭೋಗ್ಯಕ್ಕೆ ಇದೆ
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕೈಯರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್ 96322 67555

ಬೇಕಾಗಿದ್ದಾರೆ
ಗುಪ್ತ ಗೋಲ್ಡ್ ಪ್ಯಾಲೇಸ್‌ನಲ್ಲಿ ಸೇಲ್ಸ್ ವಿಭಾಗಕ್ಕೆ ಯುವತಿಯರು 18 ರಿಂದ 25 ವರ್ಷವಿರಬೇಕು. ದಾವಣಗೆರೆಯಲ್ಲಿ ವಾಸವಾಗಿದ್ದವರು, ಕಾಮರ್ಸ್ & ಬಿಕಾಂ., II ಪಿಯುಸಿ ಆಗಿರಬೇಕು, ಸಂಪರ್ಕಿಸುವ ಸಮಯ : ಬೆಳಿಗ್ಗೆ 12 ರಿಂದ ಸಾಯಂಕಾಲ 7.00 08192 230774, 232674

ಬೇಕಾಗಿದ್ದಾರೆ
ಎಸ್.ಎನ್ ಎಂಟರ್‌ಪ್ರೈಸಸ್ ದಾವಣಗೆರೆ. ನಮ್ಮಲ್ಲಿ ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಸಂಪರ್ಕಿಸಿ. 91085 08244, 81976 40948

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ 99863 61250 91132 85992

ಬೇಕಾಗಿದ್ದಾರೆ
ಅಂಗಡಿಯಲ್ಲಿ ಕೆಲಸ ಮಾಡಲು 18-30 ವಯಸ್ಸಿನ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ : ಪ್ರಕಾಶ್ ಟಿವಿ ಸೆಂಟರ್ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರೋಡ್, ದಾವಣಗೆರೆ.

ಸೈಟ್ ಮಾರಾಟಕ್ಕಿವೆ
ಶಿವ-ಪಾರ್ವತಿ ಲೇಔಟ್‌ನಲ್ಲಿ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 45x50 West, 30x50 East, 30x43 East, 30x40 West, 20x40 West, 20x30 Corner, ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

WANTED For Nayana Eye Hospital
Staff Nurse / Counselor Staff nurse & Office Staff (Freshers & Girls Only) Qualification : GNM, B.Sc, B.Com, BBM or BCA with Computer Knoweldge & tally. Contact No. 97423 77557

ಸೈಟುಗಳು ದೊರೆಯುತ್ತವೆ
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ. 97315 12365

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ : 91642 22937

ಸೈಟುಗಳು ಮಾರಾಟಕ್ಕಿವೆ
ಡಾಲರ್ಸ್ ಕಾಲೋನಿಯಲ್ಲಿ ಸುತ್ತ-ಮುತ್ತ ಲೇಔಟ್‌ನಲ್ಲಿ 30x50, 30x50 North ಅಕ್ಕ-ಪಕ್ಕ, 70x62 Corner, 40x30 South. ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

WANTED PHARMASIST
CONTACT : SHILPA DIAGNOSTICS PVT LTD., MCC B BLOCK, NEAR SWIMMING POOL, DAVANGERE. 98440 65638

ತಕ್ಷಣ ಬೇಕಾಗಿದ್ದಾರೆ
T.V.S. TOYOTA, ಬ್ರಿಟಾನಿಯಾ, ಟಾಟಾ ಮೋಟಾರ್ಸ್, ಬಿಗ್ ಬಜಾರ್ಸ್, ಕಂಪನಿಗಳಿಗೆ, ಆಫೀಸ್‌ಗಳಿಗೆ, 7th, 10th, PUC, Degree, ITI, Diploma, ಯುವಕ-ಯುವತಿಯರು ನೇರ ನೇಮಕಾತಿ, 18000/- ದಿಂದ 60000/- ವಸತಿ, ಊಟವಿದೆ. 72595 52930

ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ
ಶ್ರೀ ಮಾನಸ ಗಂಗೋತ್ರಿ ಕಾನ್ವೆಂಟ್ ಆಲೂರುಹಟ್ಟಿ ದಾವಣಗೆರೆ ತಾ., ಜಿ. ವಿದ್ಯಾರ್ಹತೆ : D.Ed, B.Ed, B.Sc ಇಂಗ್ಲಿಷ್ ಪರಿಣಿತಿ ಹೊಂದಿರಬೇಕು. 94481 86238, 96630 69188

ಬೇಕಾಗಿದ್ದಾರೆ
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ : 99001 42052, 90082 28222

ಬೇಕಾಗಿದ್ದಾರೆ
ಶ್ರೀ ಬಸವೇಶ್ವರ ಫಾರ್ಮಾದಲ್ಲಿ ಆಫೀಸ್ ಕೆಲಸ ಮಾಡಲು ಯಾವುದೇ ವಿದ್ಯಾರ್ಹತೆವುಳ್ಳ ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ವಯಸ್ಸು : 19 - 25 Full Time or Part Time Salary up to 10,000/- Contact: 8431022744

ಈಶ್ವರಿ ಮಹಿಳಾ ತರಬೇತಿ ಕೇಂದ್ರ
ಫ್ಯಾಷನ್ ಡಿಸೈನಿಂಗ್ - ಟೈಲರಿಂಗ್ ಕೋರ್ಸ್, ರಾಜಸ್ಥಾನಿ ಚೂಡಿ - ಬ್ಲೌಜ್ ಕಟಿಂಗ್, ಮಿಡಿಗಳು & ಫ್ರಾಕುಗಳು, ಹ್ಯಾಂಡ್ ಎಂಬ್ರಾಯಿಡಿಂಗ್ & ಗ್ಲಾಸ್ ಪೆಂಟಿಂಗ್, ಪಾಟ್‌ಪೇಟಿಂಗ್ ಹಾಗೂ ಕ್ರೋಷಾ ಕುಚ್ಚು, ಅನುಭವಿ ತರಬೇತುದಾರರಿಂದ ಶಿಕ್ಷಣ ಕೊಡಲಾಗುವುದು. ಆಸಕ್ತಿಯುಳ್ಳವರು ಸಂಪರ್ಕಿಸಿ : ವಿಳಾಸ : ಶ್ರೀ ಜಗದ್ಗುರು ರೇಣುಕಾ ಕೃಪಾ, # 2798, ಎಸ್. ಎಸ್. ಲೇಔಟ್, 'ಬಿ' ಬ್ಲಾಕ್ 10-A ಕ್ರಾಸ್. ಮೊ :97316 50435, 96325 80172, 95358 15543

WANTED TEACHERS
B.Sc B.Ed (PCM) - 2 B.A B.Ed (Social Science) - 2 M.Sc (Mathematics) -1 B.E - 1 Contact : ACM School Devarj Urs Layout, 'C' Block, 2nd Cross, Davanagere. 89703 21855, 82965 02675

ಮಳಿಗೆಗಳು ಬಾಡಿಗೆಗಿವೆ
ಜಿಲ್ಲಾ ಕ್ರೀಡಾಂಗಣದ ಹತ್ತಿರ, ಮೊದಲನೇ ಮಹಡಿಯಲ್ಲಿ 10x25 ಅಡಿ ಅಳತೆಯ 2 ಮಳಿಗೆಗಳು ಹಾಗೂ 2ನೇ ಮಹಡಿಯಲ್ಲಿ 25x25 ಅಡಿ ಅಳತೆಯ ಒಂದು ಮಳಿಗೆ ಬಾಡಿಗೆ ಇವೆ. ಮಳಿಗೆಗಳು ಸುಸಜ್ಜಿತವಾಗಿದ್ದು, ಬಾಡಿಗೆಗಾಗಿ ಸಂಪರ್ಕಿಸಿ : 94498 30566

ಮನೆ ಲೀಜ್‌ಗೆ ಇದೆ
2BHK ಸರಸ್ವತಿ ನಗರ ಬಿ ಬ್ಲಾಕ್ ಕೆ.ಎಸ್.ಎಸ್ ಕಾಲೇಜ್ ಎದುರು ರಸ್ತೆ, 1ನೇ ಕ್ರಾಸ್. 90196 99978, 81233 46686

ಓಂ ಶ್ರೀ ಗುರುಭ್ಯೋ ನಮಃ
ರೇಕಿ ಮತ್ತು ರಾಜಕ್ರಿಯಾ ರೇಖೆ (ಆರೋಗ್ಯ, ವಿವಾಹ, ಸಂತಾನ, ಶಿಕ್ಷಣಕ್ಕಾಗಿ ಮತ್ತು ಕಾಯಿಲೆ ಕರ್ಮ ನಿವಾರಣೆಗಾಗಿ) ಹಾವೇರಿ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗದಲ್ಲಿ ತರಬೇತಿಗಾಗಿ ಸಂಪರ್ಕಿಸಿ : 76761 83394, 90364 90336

WANTED
PROs For Chiranjeevi Academy, Ananthpur. Any Degree. Attractive income. should know both Kannada and English. Contact. 94900 00406, 63014 53621

ಗೋಡೌನ್ ಬಾಡಿಗೆಗೆ/ Gowdown Rent
5000 S.f, APMC 'D' Blockನಲ್ಲಿ ಬಾಡಿಗೆಗೆ ಇದೆ. ವಿಚಾರಿಸಿ. 94489 24115

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗರು, ದ್ವಿಚಕ್ರ ವಾಹನ ಹೊಂದಿರುವವರು, ಫೀಲ್ಡ್ ಆಫೀಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಎಸ್ಸೆಸ್ ಬಡಾವಣೆ, ಎಸ್ಸೆಸ್ ಆಸ್ಪತ್ರೆ ರಸ್ತೆ, ದಾವಣಗೆರೆ. 9000 ದಿಂದ 12000ದವರೆಗೆ ವೇತನ ಇರುತ್ತದೆ. ಸಮಯ : 10.30 ರಿಂದ ಸಂಜೆ 5ರವರೆಗೆ. 91486 20145, 89711 68504

ಕಮರ್ಷಿಯಲ್ ಬಿಲ್ಡಿಂಗ್ ಹಾಲ್ ಬಾಡಿಗೆಗೆ
1750 ಚದುರ ಅಡಿ, ಕಮರ್ಷಿಯಲ್ ಹಾಲ್ # 3598, ಜೈರುಸ್, 7ನೇ ಮುಖ್ಯ ರಸ್ತೆ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ. 8073496607, 8660835918

HOUSE FOR RENT (2 BHK)
3887, Old RTO Office, MCC `B' Block, Near Ayyappa swamy temple, Davanagere. 96111 04206

SHARP
Application for interview Sales executive any degree (two wheeler compulsory) Web site: in sharp Gaurav communications Bangalore 9379906688, 9448728866

ಬೇಕಾಗಿದ್ದಾರೆ
ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಫೋನ್ ಮಾಡಬೇಡಿ, ನಿಮ್ಮ ಹೆಸರು ಮತ್ತು ಊರು ಅಥವಾ ಏರಿಯಾ ಮೆಸೇಜ್ ಮಾಡಿ, ನಾವೇ ಫೋನ್ ಮಾಡುತ್ತೇವೆ.. ಸಜ್ಜನ್ ಸೂಪರ್ ಮಾರ್ಕೆಟ್ ಹೆಚ್.ಕೆ.ಆರ್. ಸರ್ಕಲ್, ನಿಟುವಳ್ಳಿ, ದಾವಣಗೆರೆ. 99009 71888

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಮಾನಸ ಕಮ್ಯೂನಿಟಿ ಕಾಲೇಜ್ (ರಿ) LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ , ದಾವಣಗೆರೆ-577002. 97402 58276

ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ. 94838 62779

ನೇರ ಪರೀಕ್ಷೆಗಳು
SSLC, PUC, BA, B.Com, NTC, BBA, MBA (ALL) B.Tech, Diploma, ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್ ಲಾಯರ್ ರೋಡ್, ದಾವಣಗೆರೆ. ಫೋ. : 86602 35013

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ. ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ. ಡಾ|| ಎಚ್.ಆಯ್. ದೊಡ್ಡಮನಿ (G.R.No.8969) ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ M:9740523710

ಡಾ|| ಸೋಮಶೇಖರ್. ಎಸ್.ಎ.
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ.7.6.2023ರ ಬುಧವಾರ ದಿ.8.6.2023ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ. ಅನುಗ್ರಹ ಆಸ್ಪತ್ರೆ ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. 08192-222292

SPOKEN ENGLISH
June 15 ರಿಂದ ಹೊಸ ಬ್ಯಾಚುಗಳು ಪ್ರಾರಂಭ ತಿಂಗಳಿಗೆ 1000/- ರೂ. ಮಾತ್ರ. ಮೊ : 91081 85926

ಅನು ಏಜೆನ್ಸಿ
ನಮ್ಮಲ್ಲಿ ಜರ್ಮನ್ ಶೆಫರ್ಡ್ ಮಿಶ್ರತಳಿ ನಾಯಿ ಮರಿ ದೊರೆಯುತ್ತವೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ. 97424 48252

JOB HIGHLIGHTS
Must be a Law graduate Must have key skills contract management Drafting. Arbitration contract drafting Litigation corporate law Contract Review Litigation Support Corporate Law Share resume in WhatsApp only +91 93410 10854

ಮನೆ ಬಾಡಿಗೆಗೆ ಇದೆ
ದೇವರಾಜ್ ಅರಸು ಬಡಾವಣೆ, 'ಬಿ' ಬ್ಲಾಕ್, 7ನೇ ಕ್ರಾಸ್, ದಾವಣಗೆರೆ ಇಲ್ಲಿ 15x60 ಅಳತೆಯ ಡಬಲ್ ಬೆಡ್ ರೂಂ ಇರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. 95358 50456 ಶ್ರೀ ನಿಧಿ ಕೆ.ಜಿ.

ಮನೆ ಬಾಡಿಗಿಗೆ ಇದೆ
2BHK (ಕಾರು ನಿಲುಗಡೆ ಸ್ಥಳವಿದೆ) ವಿಳಾಸ : # 800 ಶರಣು, 6ನೇ ಮುಖ್ಯ ರಸ್ತೆ ರಸ್ತೆ, (ಸಂಜೀವಿನಿ ಆಂಜನೇಯ ದೇವಸ್ಥಾನದ ರಸ್ತೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ, ದಾವಣಗೆರೆ. 99018 27501, 99017 47650

ದೋಸೆ ಬ್ಯಾಟರ್
ಆತಿಥ್ಯ ರೆಸ್ಟೋರೆಂಟ್ ಅವರ ಅತ್ಯುತ್ತಮವಾದ ಮಸಾಲಾ ದೋಸೆ ಹಿಟ್ಟು, ರುಚಿಕರವಾದ ಚಟ್ನಿ, ಪಲ್ಯ ದೊರೆಯುತ್ತದೆ. ಪಿ.ಜೆ. ಬಡಾವಣೆ, ದಾವಣಗೆರೆ. 70903 58242

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ, ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕು. ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಶಿಕ್ಷಕ / ಶಿಕ್ಷಕಿಯರು ಬೇಕಾಗಿದ್ದಾರೆ
D.Ed, B.A, B.Ed, B.Sc, M.A, B. Ed, M.Sc, B.Com, M.Com, Address : Little Champs Gurukulam School, Near HKR Circle, Nittuvalli, Davanagere. 90609 06039, 98443 32559

ಶಿಕ್ಷಕಿಯರು ಬೇಕಾಗಿದ್ದಾರೆ
PUC, NTC, BA., B.com., BSc. T.C.H. (D.Ed), B.Ed., ಮಹಮ್ಮದನ್ ಕಾನ್ವೆಂಟ್ ಮಣಿಕಂಠ ಸರ್ಕಲ್ ನಿಟುವಳ್ಳಿ, ದಾವಣಗೆರೆ. 93411 19195, 99800 32237

ಸೈಟುಗಳು ಮಾರಾಟಕ್ಕಿವೆ
ಎಂಸಿಸಿ ಬಿ ಬ್ಲಾಕ್, 40x60, 40x60, 22x60 ಎಂಸಿಸಿ ಬಿ ಬ್ಲಾಕ್, 17x60 ಕಮರ್ಷಿಯಲ್ ಶಿವ ಪಾರ್ವತಿ 40x65, 30x40, 30x50 ಬಸವೇಶ್ವರ 40x60, 30x40, 30x50 30x50, ಆವರಗೆರೆ 30x50, 30x40 30x50, ಆಂಜನೇಯ ಬಡಾವಣೆ, 40x50 ಪ್ರಶಾಂತ್ : 73494 88737

WANTED TEACHERS
B.Sc, D.Ed, B.Ed - 3, NTC, Hindi B.Ed - 1 Contact with Originals 99801 48289, 87468 95680

ಬೇಕಾಗಿದ್ದಾರೆ
ಸ್ವೀಟ್ ಕೌಂಟರ್ ಸಪ್ಲೈಯರ್ Shift-1 8:00-3:00 Shift-2 3:00-10:00 ಅಡುಗೆ ಹೆಲ್ಪರ್ ಕೆಲಸಕ್ಕೆ Shift 10:00-5:00 ತಿಂಡಿ ಭಟ್ಟರು 6:30-12:30 95388 96927

ಬೇಕಾಗಿದ್ದಾರೆ
ಎಂ.ಎಸ್. ಡಿಸ್ಟ್ರಿಬ್ಯೂಟರ್ಸ್ ಆಕ್ಸ್‌ಫರ್ಡ್ ಸ್ಕೂಲ್ ಹತ್ತಿರ, ಬೇತೂರ್ ರೋಡ್, ದಾವಣಗೆರೆ. Sales & Delivery boys, Salary 9K to 10K First Preference Experience Candidate 9008115066, 9008114452

WANTED
B.Com.,/ PUC Candidates with Computer Knowledge Graduates with Computer knowledge for account maintainance MANGALA CONSTRUCTIONS DAVANGERE. 8861462469, 8095963636, 9844163163

CHANGE OF NAME
I UMESHA KADAPPA (old name) S/o Late Kadappa Shamanur Halappa Resident of # 1419/1, Ist Main, Ist Cross, Near Huligemma Temple, Gandhinagar, Davangere-577001 Dist, Karnataka has changed my name as UMESH KADAPPA vide affidavit dated 30.05.2023 sworn before Notary I.P Brahmakumar, Davangere, Henceforth all my transactions and dealings will be in my new name UMESH KADAPPA Sd/- UMESH KADAPPA

ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ
ಫೋ. :99866 17127

ಬೇಕಾಗಿದ್ದಾರೆ
ದಾವಣಗೆರೆ ನಗರದ ಉತ್ತರ ಕರ್ನಾಟಕ ಶೈಲಿಯ ಶರಭೇಶ್ವರ ಊಟದ ಹೋಟೆಲ್ ನಲ್ಲಿ ರೊಟ್ಟಿ, ಚಪಾತಿ ಮಾಡಲು ಹಾಗೂ ಸರ್ವೀಸ್, ಕ್ಲೀನಿಂಗ್‌ಗೆ ಮಹಿಳೆಯರು ಬೇಕಾಗಿದ್ದಾರೆ.ಪರಸ್ಥಳದವರಿಗೆ ಉಚಿತ ಊಟ ವಸತಿ ಸೌಲಭ್ಯವಿದೆ. ಸಂಪರ್ಕಿಸಿ. 8884704025

WANTED TEACHERS
Kids Campus International Pre school Davangere Wanted : Teachers for playgroup, Pre-kg, Lkg and Ukg Fluency in English 99003 78196

ಬೇಕಾಗಿದ್ದಾರೆ
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. PUC or Any Degree. ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577002.

ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ
ಶಾಮನೂರು ಗ್ರಾಮದ ಡೋರ್ ನಂ. 169/8ರಲ್ಲಿ 761 ಚದರ ಮೀಟರ್ ಅಳತೆ ಇರುವ ಕಮರ್ಷಿಯಲ್ ಖಾಲಿ ನಿವೇಶನ ಮಾರಾಟಕ್ಕಿದೆ. ಸಂಪರ್ಕಿಸಿ. 76250 61005, 92417 84884

ಸುಸ್ಥಿರ ಆಹಾರ - ಕೃಷಿ ಪದ್ಧತಿಯಿಂದ ಬಡತನ, ಹಸಿವು, ರೋಗ ಮುಕ್ತ ಜೀವನ ಸಾಧ್ಯ

ಪ್ರತಿ ವರ್ಷ ಆಚರಿಸುವ ವಿಶ್ವ ತಂಬಾಕು ರಹಿತ ದಿನದ ಉದ್ದೇಶವು ತಂಬಾಕಿನಿಂದ ಉಂಟಾಗುವ ಮಾರಣಾಂತಿಕ ಕಾಯಿಲೆಗಳ ಬಗ್ಗೆ ಜನ ಜಾಗೃತಿ ಮೂಡಿಸುವುದು, ತಂಬಾಕು ರಹಿತ ಆರೋಗ್ಯಕರ ಜೀವನ ನಡೆಸುವುದು ಮತ್ತು ಮುಂದಿನ ಪೀಳಿಗೆಯನ್ನು ತಂಬಾಕು ಮುಕ್ತರನ್ನಾಗಿಸುವುದು. ವಿಶ್ವ ಸಂಸ್ಥೆಯು ಇತರೆ ಸದಸ್ಯ ದೇಶಗಳ ಜೊತೆಗೂಡಿ ಏಪ್ರಿಲ್ 7, 1987 ರಲ್ಲಿ ಮೊದಲ ಬಾರಿಗೆ ವಿಶ್ವ ಧೂಮಪಾನ ರಹಿತ ದಿನ ಎಂದು ನಿರ್ಣಯಿಸಿತಾದರೂ 1988 ರಲ್ಲಿ 'ಮೇ 31 ವಿಶ್ವ ತಂಬಾಕು ರಹಿತ ದಿನ'ವೆಂದು ಅಧಿಕೃತವಾಗಿ ಘೋಷಿಸಿತು. ಅಂದಿನಿಂದ ಪ್ರತಿ ವರ್ಷ ಮೇ 31 ರಂದು ತಂಬಾಕಿನ ವಿವಿಧ ವಿಷಯಗಳ ಕುರಿತಾದ ಚರ್ಚೆ, ಆಂದೋಲನ, ಜನ ಜಾಗೃತಿ ಕಾರ್ಯಕ್ರಮ ಗಳು ವಿಶ್ವದಾದ್ಯಂತ ನಡೆಯುತ್ತಿವೆ.

ಹದಿನೇಳನೇ ಶತಮಾನದಲ್ಲಿ ಪೋರ್ಚುಗೀಸರಿಂದ ಭಾರತಕ್ಕೆ ಪರಿಚಯಿಸಲ್ಪಟ್ಟ ತಂಬಾಕು ಪ್ರಸ್ತುತ ದಿನಗಳಲ್ಲಿ ಅಗೆಯುವ ಮತ್ತು ಸೇದುವ ರೂಪದಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿದೆ. ಸಿಗರೇಟ್ ಬಳಕೆ ನಗರ ಪ್ರದೇಶಗಳಲ್ಲಿ, ಮೇಲ್ವರ್ಗದವರಲ್ಲಿ, ವಿದ್ಯಾವಂತರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದರೆ ಗುಟ್ಕಾ, ಪಾನ್ ಮಸಾಲಾ ಪದಾರ್ಥಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳ ಯುವಕರ, ಕೂಲಿ ಕಾರ್ಮಿಕರ, ರಿಕ್ಷಾ ಚಾಲಕರ, ಕ್ಯಾಬ್ ಡ್ರೈವರ್‌ಗಳ ದಣಿವು ಮತ್ತು ಹಸಿವು ನೀಗಿಸುವ ಸಾಧನಗಳಾಗಿ ಕಾಣಸಿಗುತ್ತಿವೆ. ಇತ್ತೀಚಿನ 'ಗ್ಯಾಟ್' ಸಮೀಕ್ಷೆಯ ವರದಿ ಪ್ರಕಾರ ನಮ್ಮ ದೇಶದಲ್ಲಿ ಸುಮಾರು 265 ಮಿಲಿಯನ್ ವಯಸ್ಕರು ಸೇದುವ ಮತ್ತು ಆಗೆಯುವ ತಂಬಾಕಿಗೆ ವ್ಯಸನಿಗಳಾಗಿದ್ದಾರೆ ಎಂದು ತಿಳಿದು ಬಂದಿದೆ. ಅದರಲ್ಲಿ ಶೇ. 42 ಪುರುಷರು ಹಾಗು ಶೇ. 14 ಮಹಿಳೆಯರು ಎನ್ನಲಾಗಿದೆ. ಮಿತಿ ಮೀರಿ ಬೆಳೆಯುತ್ತಿರುವ ಈ ದುಶ್ಚಟವು ಪ್ರತಿ ವರ್ಷ 8 ಮಿಲಿಯನ್ ಜನರನ್ನು ಬಲಿತೆಗೆದುಕೊಳ್ಳುತ್ತಿದೆ ಎಂಬುದು ಅತ್ಯಂತ ಶೋಚನೀಯ ವಿಷಯ.ವ್ಯಸನಿಗಳಲ್ಲಿ ಹೆಚ್ಚುತ್ತಿರುವ ಹೃದಯ ಸಂಬಂಧಿ ರೋಗಗಳು, ಉಸಿರಾಟದ ತೊಂದರೆಗಳು ಪಾರ್ಶ್ವವಾಯು, ಬಾಯಿಯ ಕ್ಯಾನ್ಸರ್ ನಂತಹ ಮಾರಣಾಂತಿಕ ಕಾಯಿಲೆಗಳು ಕುಟುಂಬವನ್ನು ಆರ್ಥಿಕವಾಗಿ ಮತ್ತು

ಮಾನಸಿಕವಾಗಿ ಕುಗ್ಗಿಸುತ್ತಿದ್ದರೆ, ಪರೋಕ್ಷ ಧೂಮಪಾನಿಗಳಲ್ಲಿ (ಸೆಕೆಂಡ್ ಹ್ಯಾಂಡ್ ಸ್ಮೋಕರ್) ಕಡಿಮೆ ತೂಕದ ಶಿಶುವಿನ ಜನನ, ಸಂತಾನೋತ್ಪತ್ತಿ ಸಮಸ್ಯೆಗಳು ಕಾಡುತ್ತಿವೆ.

ಈ ದುಶ್ಚಟವು ಶಾರೀರಿಕ ಸಮಸ್ಯೆಯಾಗದೇ ಉಳಿಯದ ಮಾನಸಿಕ, ಆರ್ಥಿಕ, ಸಾಮಾಜಿಕ ಹಾಗು ನೈಸರ್ಗಿಕ ಆಯಾಮಗಳಿಗೂ ಪಸರಿಸಿ ಬಿಡಿಸಲಾಗದ ಕಗ್ಗಂಟಾಗಿ ಹೋಗಿದೆ. ತಂಬಾಕು ಉದ್ದಿಮೆದಾರರು ಹಣ ಗಳಿಸುವ ಭರದಲ್ಲಿ ಸಿಗರೇಟ್, ಗುಟ್ಕಾ, ಪಾನ್ ಮಸಾಲಾ ತಯಾರಿಕೆಗೆ ಅಪಾಯಕಾರಿ ರಾಸಾಯನಿಕಗಳು, ಅತಿ ಸೂಕ್ತ ಪ್ಲಾಸ್ಟಿಕ್ ಬಳಸಿ ನಮ್ಮ ಭೂಮಂಡಲವನ್ನು 'ವಿಷಕಾರಿ'ಯಾಗಿ ಪರಿವರ್ತಿಸುತ್ತಿದ್ದರೆ, ತಂಬಾಕು ವ್ಯಸನಿಗಳು ಎಲ್ಲೆಂದರಲ್ಲಿ ಸೇದಿ ಬಿಸಾಡುವ ಸಿಗರೇಟ್ ತುಂಡುಗಳು ಹಾಗು ಗುಟ್ಕಾ ಪ್ಯಾಕೆಟ್‌ಗಳು, ಸಿಗರೇಟ್ ಹೊಗೆಯಲ್ಲಿರುವ ವಿಷಕಾರಿ ಕಾರ್ಬನ್ ಡೈಆಕ್ಸ ಹಾಗು ಸಿಗರೇಟ್ ತುಂಡಿನಲ್ಲಿರುವ ಸೀಸ, ವಾ, ನೀರು ಮತ್ತು ಮಣ್ಣನ್ನು ಸೇರಿ ಅನೇಕ ಜೀವರಾಶಿಗಳಿಗೆ ಕಂಟಕವಾಗಿ ಪರಿಣಮಿಸುತ್ತಿದೆ. ಇನ್ನು ಅಂತರರಾಷ್ಟ್ರೀಯ ತಂಬಾಕು ಕಂಪನಿಗಳು ಆರ್ಥಿಕವಾಗಿ ಹಿಂದಿಳಿದ ದೇಶಗಳಿಗೆ ಹಣದ ಆಸೆಯನ್ನು ತೋರಿಸಿ ರೈತರಿಗೆ ಪ್ರೋತ್ಸಾಹ ನೀಡುತ್ತಿರುವ ಕಾರಣಕ್ಕಾಗಿ ಸುಮಾರು 125 ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳು ಬರಸಹಿಷ್ಣು ಮತ್ತು ಅಲ್ಪಾವಧಿ ಬೆಳೆಯೆಂದು ತಂಬಾಕನ್ನು 1 ಮಿಲಿಯನ್ ಹೆಕ್ಟೇರು ಪ್ರದೇಶದಲ್ಲಿ ಬೆಳೆಯತೊಡಗಿವೆ. ನಮ್ಮ ದೇಶವು ತಂಬಾಕು, ರಫ್ತು ಮಾಡುವ ದೇಶಗಳಲ್ಲಿ 2 ನೇ ಸ್ಥಾನ ಪಡೆದಿದ್ದು, ಪ್ರತಿ ವರ್ಷ 1,400 ಕೋಟಿ ವಿದೇಶಿ ವಿನಿಮಯಗಳಿಗೆ ತಂಬಾಕು ಒಂದರಿಂದಲೇ ಉತ್ಪತ್ತಿ ಮಾಡುತ್ತಿದೆ.

ಅತ್ಯಂತ ಲಾಭದಾಯಕ ಉದ್ದಿಮೆಯಾಗಿ ಬೆಳೆದಿರುವ ತಂಬಾಕು ಅನೇಕ ಕೃಷಿಕರನ್ನು ತನ್ನತ್ತ ಆಕರ್ಷಿಸುತ್ತಿದ್ದು, ಭಾರತ ಹಾಗು ವಿಶ್ವದ ಅನೇಕ ದೇಶಗಳು ಪ್ರತಿ ವರ್ಷ 3.5 ಮಿಲಿಯನ್ ಹೆಕ್ಟೇರು ಭೂಪ್ರದೇಶವನ್ನು ತಂಬಾಕು ಕೃಷಿಗಾಗಿ ಬಳಸತೊಡಗಿವೆ. ಇದರಿಂದಾಗಿ ಆರೋಗ್ಯಕರ ಆಹಾರ ಬೆಳೆಗಳ ಉತ್ಪಾದನೆಯಲ್ಲಿ ಕೊರತೆಯುಂಟಾಗುತ್ತಿದೆ ಹಾಗು ತಂಬಾಕು ಬೆಳೆಯಲಾದ ಮಣ್ಣು ತನ್ನ ಫಲವತ್ತತೆಯನ್ನು ಕಳೆದುಕೊಂಡು ಮ ರು ಭೂ ಮಿ ಯಾ ಗಿ ಪರಿವರ್ತಿತವಾಗುತ್ತಿದೆ. ಆಫ್ರಿಕಾ ಖಂಡದ ಅನೇಕ ಕಡಿಮೆ ಆದಾಯದ ದೇಶಗಳು ತಂಬಾಕಿನಿಂದ ಬರುವ ಲಾಭವನ್ನು ಆಹಾರ ಆಮದು ಮಾಡಿಕೊಳ್ಳುವಲ್ಲಿ ಉಪಯೋಗಿಸುತ್ತಿದ್ದು ಬಡತನದ ಸುಳಿಯಿಂದ ಹೊರಬರಲಾರದ ಪರಿಸ್ಥಿತಿಯನ್ನು ಸೃಷ್ಟಿಸಿಕೊಂಡಿವೆ. ಇನ್ನು ಮಧ್ಯಮ ಆದಾಯದ ದೇಶಗಳು ಅತಿ ಹೆಚ್ಚು ಲಾಭಗಳಿಸುವ ದುರಾಸೆಯಲ್ಲಿ ಫಲವತ್ತಾದ ಭೂಮಿ, ಹಸಿರಾದ ಕಾಡನ್ನು ನಾಶ ಪಡಿಸಿ ಪರಿಸರ ವ್ಯವಸ್ಥೆಯನ್ನು ಹಾಳುಮಾಡತೊಡಗಿವೆ. ಈ ಆಘಾತಕಾರಿ ಕಾರಣಗಳಿಂದಾಗಿ ವಿಶ್ವ ಸಂಸ್ಥೆಯು ಪ್ರಸ್ತುತ ವರ್ಷವನ್ನು 'ನಮಗೆ ಆಹಾರ ಬೇಕು ತಂಬಾಕಲ್ಲ' ಎಂಬ ಘೋಷ ವಾಕ್ಯದಿಂದ ಜನರಲ್ಲಿ ಅರಿವು ಮೂಡಿಸಲು ಎಲ್ಲಾ ಸದಸ್ಯ ದೇಶಗಳಿಗೆ ಕರೆಕೊಟ್ಟಿದೆ, ನಾವೇ ಸೃಷ್ಟಿಸಿಕೊಂಡಿರುವ ಈ ಗಂಭೀರ ಸಮಸ್ಯೆಯ ಬಗ್ಗೆ ಈಗಲೂ ನಾವು ಎಚ್ಚರ ವಹಿಸದಿದ್ದರೆ ಮುಂಬರುವ ಪೀಳಿಗೆಗೆ ಹಸಿವು, ದಾಹದಿಂದ ಬಳಲುತ್ತಿರುವ ಪ್ರಪಂಚವನ್ನು ಕೊಡುಗೆಯಾಗಿ ನೀಡಬೇಕಾದ ಪರಿಸ್ಥಿತಿ ಎದುರಾಗಬಹುದು. ಸೃಷ್ಟಿಯ ವಿಕಸನ ಶ್ರೇಣಿಯ ಮುಂಚೂಣಿಯಲ್ಲಿರುವ ನಾವು ಇನ್ನಾದರೂ ವೈವಿಧ್ಯತೆಯಿಂದ ಕೂಡಿದ ಆರೋಗ್ಯಕರ ಹಾಗು ಸುಸ್ಥಿರವಾದ ಆಹಾರ ಮತ್ತು ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಬಡತನ, ಹಸಿವು, ರೋಗ ಮುಕ್ತವಾದ ಉನ್ನತ ಗುಣ ಮಟ್ಟದ ಜೀವನ ನಡೆಸಿ ಮುಂದಿನ ಪೀಳಿಗೆಗೆ ಮಾದರಿಯಾಗುತ್ತಾ ಸಾಗೋಣವಲ್ಲವೇ ?

-ಡಾ. ಉಷಾ ಜಿ.ವಿ.
ಪ್ರಾಧ್ಯಾಪಕರು
ಸಮುದಾಯ ದಂತ ಶಾಸ್ತ್ರ ವಿಭಾಗ
ಬಾಪೂಜಿ ದಂತ ವೈದ್ಯಕೀಯ
ಮಹಾವಿದ್ಯಾಲಯ, ದಾವಣಗೆರೆ.

ಗೆಳೆತನ ಬೆಳೆಸಿ 1.80 ಕೋಟಿ ವಂಚಿಸಿದ ನೈಜೀರಿಯಾದ ಇಬ್ಬರ ಬಂಧನ

ಗುರುಗ್ರಾಮ, ಮೇ 30 – ಮಹಿಳೆಯೊಬ್ಬರ ಜೊತೆ ಇನ್‌ಸ್ಟಾಗ್ರಾಂ ಮೂಲಕ ಸ್ನೇಹ ಬೆಳೆಸಿ 1.80 ಕೋಟಿ ರೂ. ಲಪಟಾಯಿಸಿದ ನೈಜೀರಿಯಾದ ನಾಗರಿಕರನ್ನು ಬಂಧಿಸಲಾಗಿದೆ.

ಕಳೆದ ಏಪ್ರಿಲ್ 10ರಂದು ಮಹಿಳೆ ವಂಚನೆಯಾದ ಬಗ್ಗೆ ಮನೇಸರ್ ಪೊಲೀಸರಿಗೆ ದೂರು ನೀಡಿದ್ದರು.

ಕಳೆದ ವರ್ಷ ಇನ್‌ಸ್ಟಾಗ್ರಾಂ ಮೂಲಕ ವ್ಯಕ್ತಿಯೋರ್ವ ಸಂಪರ್ಕಿಸಿದ್ದ. ಬ್ರಿಟಿಷ್ ಏರ್‌ವೇಯ್ಸ್ ಪೈಲಟ್ ಎಂದು ಆತ ಹೇಳಿಕೊಂಡಿದ್ದ. ನಿಯಮಿತವಾಗಿ ಆತ ನನ್ನನ್ನು ಮಾತನಾಡಿಸುತ್ತಿದ್ದ. ಪಾರ್ಸಲ್ ಮೂಲಕ ಐಫೋನ್, ಆಭರಣ ಇತ್ಯಾದಿ ಕೊಡುಗೆಗಳನ್ನು ಕೊಡುತ್ತಿದ್ದ ಎಂದು ಮಹಿಳೆ ದೂರಿನಲ್ಲಿ ಹೇಳಿದ್ದಾರೆ. ಕಳೆದ ಡಿಸೆಂಬರ್ 6ರಂದು ಕರೆ ಮಾಡಿದ ವ್ಯಕ್ತಿ, ನನ್ನ ಹೆಸರಿಗೆ ಪಾರ್ಸಲ್ ಬಂದಿದೆ. ಇದನ್ನು ಪಡೆಯಲು 35 ಸಾವಿರ ರೂ. ತೆರಿಗೆ ಕಟ್ಟುವಂತೆ ತಿಳಿಸಿದ್ದ.

ಅದರಂತೆ ಮಹಿಳೆ ಹಣವನ್ನು ಬ್ಯಾಂಕ್ ಖಾತೆಯೊಂದರಲ್ಲಿ ಜಮಾ ಮಾಡಿದ್ದರು. ಆದರೆ, ವ್ಯಕ್ತಿ ನಾನಾ ನೆಪ ಒಡ್ಡಿ ಇನ್ನಷ್ಟು ಮತ್ತಷ್ಟು ಹಣ ಪಾವತಿಸುವಂತೆ ತಿಳಿಸುತ್ತಿದ್ದ. ವಂಚನೆಯಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವಷ್ಟರಲ್ಲಿ ಮಹಿಳೆ ವ್ಯಕ್ತಿಗೆ 1.80 ಕೋಟಿ ರೂ. ಪಾವತಿಸಿದ್ದಾಗಿ ದೂರಿನಲ್ಲಿ ಹೇಳಲಾಗಿದೆ.

ಈ ಬಗ್ಗೆ ವಿಚಾರಣೆ ನಡೆಸಿದ ಸೈಬರ್ ಅಪರಾಧ ದಳದ ಪೊಲೀಸರು, ದೆಹಲಿಯಲ್ಲಿದ್ದ ನೈಜೀರಿಯಾ ಎಬುಕಾ ಫೆಲಿಕ್ಸ್ ಹಾಗೂ ಚುಕ್ವಾಕಾ ಎವೆರೆ ಎಂಬುವವರನ್ನು ಬಂಧಿಸಿದ್ದಾರೆ.

ಬಂಧಿತರಿಂದ ಒಂದು ಚೆಕ್ ಬುಕ್, 16 ಬ್ಯಾಂಕ್ ಪಾಸ್‌ಬುಕ್, 25 ಎಟಿಎಂ ಕಾರ್ಡ್ ಮತ್ತಿತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಶಾಸಕಿ ಲತಾ ಮಲ್ಲಿಕಾರ್ಜುನ್ ಅವರಿಗೆ ವರಸದ್ಯೋಜಾತ ಶ್ರೀಗಳಿಂದ ಸನ್ಮಾನ

ಹರಪನಹಳ್ಳಿ

ಹರಪನಹಳ್ಳಿ, ಮೇ 30- ನೂತನ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್‌ರವರಿಗೆ ತೆಗ್ಗಿನಮಠ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ವರಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿಯವರು ಸನ್ಮಾನಿಸಿ, ಗೌರವಿಸಿದರು. ಈ ವೇಳೆ ತೆಗ್ಗಿನ ಮಠ ಸಂಸ್ಥಾನದ ಆಡಳಿತಾಧಿಕಾರಿ ಟಿ.ಎಂ. ಚಂದ್ರಶೇಖರಯ್ಯ, ಔಷಧಿ ವರ್ತಕರ ಸಂಘದ ತಾಲ್ಲೂಕು ಅಧ್ಯಕ್ಷ ರಾಜಶೇಖರಸ್ವಾಮಿ, ಗಾಣಿಗ ಸಮಾಜದ ತಾಲ್ಲೂಕು ಅಧ್ಯಕ್ಷ ದೊಡ್ಡಬಸಪ್ಪ, ಮುಖಂಡ ಟಿ.ಎಂ. ವೀರೇಶಸ್ವಾಮಿ ಸೇರಿದಂತೆ ಇತರರು ಇದ್ದರು.

ಹೊನ್ನಾಳಿಯಲ್ಲಿ ಪುರಸ್ಕಾರ

ಹೊನ್ನಾಳಿ, ಮೇ 30- ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವೀರಶೈವ ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ಸಮಾಜದ ಸಾಧಕರಿಗೆ ಸನ್ಮಾನ ಸಮಾರಂಭವು ಜೂನ್ 4 ರ ಭಾನುವಾರ ಬೆಳಗ್ಗೆ 11 ಗಂಟೆಗೆ ಶ್ರೀ ಬಸವೇಶ್ವರ ಸಮುದಾಯ ಭವನದಲ್ಲಿ ನಡೆಯಲಿದೆ. ಕೆ. ಬೆನಕಪ್ಪ, ಹಾಲಪ್ಪ ಪಟ್ಟಣಶೆಟ್ಟಿ, ಬೆನಕಪ್ಪ, ಕೆ.ವಿ. ಪ್ರಸನ್ನ, ನಾಗಮ್ಮ ಎಸ್, ವೀರೇಶ್ ಬೆಳಗುತ್ತಿ, ಇಡ್ಲಿ ರುದ್ರಪ್ಪ, ವಿಜಯಮ್ಮ ಚಂದ್ರಶೇಖರಪ್ಪ ಕುಂಕೋದ ಸನ್ಮಾನ ಸ್ವೀಕರಿಸಲಿದ್ದಾರೆ.

ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಕೆ.ಯು. ಮಂಜೇಶ್ವರ, ಜ್ಯೋತಿ ಪ್ರಕಾಶ್, ಮಂಗಳಾ ಎನ್. ನೆರವೇರಿಸಲಿದ್ದು, ಗಣ್ಯರ ಸನ್ಮಾನವನ್ನು ನಾಗನಗೌಡ್ರು, ವಾಣಿಗುರು ನೆರವೇರಿಸಲಿರುವರು.

ಸಮಾರಂಭದ ಅಧ್ಯಕ್ಷತೆಯನ್ನು ವೀರಶೈವ ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷರು ಪಿ.ವೀರಪ್ಪ ವಹಿಸಲಿದ್ದು, ತಾಲ್ಲೂಕು ವೀರಶೈವ ಪಂಚಮಸಾಲಿ ಸಮಾಜದ ಗೌರವಾಧ್ಯಕ್ಷರಾದ ಹೆಚ್.ಪಿ. ರಾಜಕುಮಾರ್ ಉದ್ಘಾಟಿಸಲಿದ್ದು, ಅತಿಥಿಗಳಾಗಿ ಪರಮೇಶ್ ಪಟ್ಟಣಶೆಟ್ಟಿ, ಎನ್.ಡಿ. ಪಂಚಾಕ್ಷರಪ್ಪ, ಕಾಶೀನಾಥ್, ಹಾಲೇಶ್ ಕುಂಕೋದ್, ಜಿ. ದೊಡ್ಡಪ್ಪ, ಶಿಲ್ಪಾ ರಾಜುಗೌಡ್ರು, ಹಾಲೇಶ್ ಕೆ.ಎನ್, ಹೆಚ್.ಪಿ. ಗಿರೀಶ್ ಆಗಮಿಸಲಿದ್ದಾರೆ.

ರಥಯಾತ್ರೆಗೆ ಶಾಮನೂರು ಕುಟುಂಬದಿಂದ ಪೂಜೆ

ದಾವಣಗೆರೆ, ಮೇ 30 - ಬೆಂಗಳೂರಿನ ಜ್ಞಾನ ಆಂಜನೇಯ ಸೇವಾ ಟ್ರಸ್ಟ್ ವತಿಯಿಂದ ಕನ್ನಡ ತಾಯಿ ಭುವನೇಶ್ವರಿ ದೇವಿ ಮೂಲ ಜ್ಯೋತಿಯ 108 ದಿನದ ರಥಯಾತ್ರೆ ಇಂದು ದಾವಣಗೆರೆಗೆ ಆಗಮಿಸಿತ್ತು.

ದಾವಣಗೆರೆ ಮಹಾಜನತೆಯ ಪರವಾಗಿ ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪತ್ನಿ ಶ್ರೀಮತಿ ಪ್ರಭ ಮಲ್ಲಿಕಾರ್ಜುನ್ ಅವರು ದೇವಿಗೆ ಪೂಜೆ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಟ್ರಸ್ಟ್ ನ ಪದಾಧಿಕಾರಿಗಳು ಮತ್ತು ಕನ್ನಡ ಅಭಿಮಾನಿಗಳು ಉಪಸ್ಥಿತರಿದ್ದರು.

ರಾಜ್ಯ ಸ.ನೌಕರರ ಮಕ್ಕಳಿಗೆ ಪುರಸ್ಕಾರ

ದಾವಣಗೆರೆ, ಮೇ 30- ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಯಲ್ಲಿ ಶೇ. 90 ಕ್ಕೂ ಹೆಚ್ಚು ಅಂಕ ಪಡೆದ ಜಿಲ್ಲೆಯ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಂದ 2023 ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಘದಿಂದ ನಿಗದಿಗೊಳಿಸಿರುವ ನಮೂನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ, ತಾಲ್ಲೂಕು, ಯೋಜನಾ ಶಾಖೆ, ಅಧ್ಯಕ್ಷರು ಗಳಿಂದ ಸೇವಾ ದೃಢೀಕರಣ ಪ್ರಮಾಣ ಪತ್ರವನ್ನು ದೃಢೀಕರಿಸಿ, ಆನ್‌ಲೈನ್ ಲಿಂಕ್‌ನೊಂದಿಗೆ 1.0 ಎಂ.ಬಿ ಮೀರದಂತೆ ಇದೇ ದಿನಾಂಕ 31 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಂಘದ ಜಿಲ್ಲಾ ಕಾರ್ಯದರ್ಶಿ ಸಿ. ಗುರುಮೂರ್ತಿ (98446 45183) ಅವರನ್ನು ಸಂಪರ್ಕಿಸಲು ಜಿಲ್ಲಾಧ್ಯಕ್ಷ ವೀರೇಶ ಎಸ್. ಒಡೇನಪುರ ತಿಳಿಸಿದ್ದಾರೆ.

ನಗರದಲ್ಲಿ ಇಂದು ನೇರ ಸಂದರ್ಶನ

ದಾವಣಗೆರೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, 'ಮಾದರಿ ವೃತ್ತಿ ಕೇಂದ್ರ'ದ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ ನಡೆಯಲಿದೆ.

ನೇರ ಸಂದರ್ಶನದಲ್ಲಿ ದೇಶಪಾಂಡೆ ಫೌಂಡೇಶನ್, ಅನ್‌ಮೋಲ್ ಪಬ್ಲಿಕ್ ಸ್ಕೂಲ್ ಹಾಗೂ ಇತರೆ ನಗರದ ಖಾಸಗಿ ಕಂಪನಿಗಳು ಭಾಗವಹಿಸುತ್ತಿದ್ದು, ಯಾವುದೇ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿದ 18-30 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೊ.ಸಂ: 6361550016, ಸಂಪರ್ಕಿಸಲು ಜಿಲ್ಲಾ ಉದ್ಯೋಗಾಧಿಕಾರಿ ಡಿ. ರವೀಂದ್ರ ತಿಳಿಸಿದ್ದಾರೆ.

ಅಕಾಲಿಕ ಮಳೆಗೆ ಬೆಳೆ ನಾಶ : ತುರ್ತು ಕ್ರಮಕ್ಕೆ ಒತ್ತಾಯ

ದಾವಣಗೆರೆ, ಮೇ 30- ಮುಂಗಾರು ಹಂಗಾಮಿನ ಅಕಾಲಿಕ ಮಳೆಯಿಂದ ಭತ್ತ, ತೋಟದ ಬೆಳೆಗಳು, ಬಡವರ ಮನೆಗಳು ನಾಶವಾಗಿದ್ದು, ತುರ್ತು ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸಿದೆ.

ದಾವಣಗೆರೆ ಜಿಲ್ಲೆ, ತಾಲ್ಲೂಕಿನ ಕಸಬಾ ಹೋಬಳಿ ಮತ್ತು ಹರಿಹರ ತಾಲ್ಲೂಕಿನ ಮಲೇಬೆನ್ನೂರು ಹೋಬಳಿ, ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ, ಸಂತೇಬೆನ್ನೂರು ಹೋಬಳಿಗಳಲ್ಲಿ ಭತ್ತದ ಬೆಳೆಗಳು ಹಾಳಾಗಿದ್ದು, ಭತ್ತದ ಮಾರುಕಟ್ಟೆಯಲ್ಲಿ ಹಾಲಿ 2200 ರಿಂದ 2300 ರೂ. ದರ ನಿಗದಿಯಾಗಿದ್ದು, ಪ್ರಸ್ತುತ 40 ರಿಂದ 50 ಚೀಲ ಇಳುವರಿ ಬರುತ್ತಿದೆ. ಪ್ರತಿ ಎಕರೆಗೆ 75 ಸಾವಿರದಿಂದ 80 ಸಾವಿರ ಹಣ ಬರುತ್ತದೆ. ಅಕಾಲಿಕ ಮಳೆಯಿಂದಾಗಿ 60 ಸಾವಿರ ನಷ್ಟ ಉಂಟಾಗುತ್ತಿದೆ.

ಸರ್ಕಾರ ಭೂಮಿಯ ಉಳುಮೆ, ಗೊಬ್ಬರ, ಔಷಧಿ ಮತ್ತು ಕೂಲಿ ಕೆಲಸದ ಬಾಬ್ತು ಪ್ರತಿ ಎಕರೆಗೆ 30 ಸಾವಿರ ವೆಚ್ಚವಾಗುತ್ತದೆ. ಆದ್ದರಿಂದ ಪ್ರತಿ ಎಕರೆಗೆ 50 ಸಾವಿರ ರೂ. ಸರ್ಕಾರದಿಂದ ರೈತರ ಖಾತೆಗೆ ಜಮಾ ಮಾಡಬೇಕೆಂದು ಸಂಘದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್, ಜಿಲ್ಲಾಧ್ಯಕ್ಷ ಕೆ.ಎಸ್. ಪ್ರಸಾದ್ ಆಗ್ರಹಿಸಿದ್ದಾರೆ.

ತೋಟದ ಬೆಳೆಗಳಾದ ಬಾಳೆ, ಎಲೆಬಳ್ಳಿ, ಮಾವು ಇತರೆ ಮಳೆ ಮತ್ತು ಆಲೆಕಲ್ಲು ಮಳೆಯಿಂದ ಬೆಳೆ ನಾಶವಾಗಿದ್ದು, ಪ್ರತಿ ಎಕರೆಗೆ 50 ಸಾವಿರ ಪರಿಹಾರವನ್ನು ನೀಡಬೇಕು. ಗಾಳಿ, ಮಳೆಯಿಂದ ಕಡು ಬಡವರ ಮನೆಗಳ ಹೆಂಚು, ತಗಡುಗಳು ಹಾರಿ ಹೋಗಿದ್ದು, ಮನೆಗಳಿಗೂ ಹಾನಿ ಉಂಟಾಗಿರು ವುದರಿಂದ ಅವರಿಗೆ ಶಾಶ್ವತ ಸೂರು ಕಲ್ಪಿಸಿಕೊಡುವಂತೆ ಒತ್ತಾಯಿಸಿದ್ದಾರೆ.

ರಾಷ್ಟ್ರ ಮಟ್ಟದ ಪಂಜ ಕುಸ್ತಿ : ಕೆಂಚಪ್ಪಗೆ ಚಿನ್ನ

ಮಲೇಬೆನ್ನೂರು

ಮಲೇಬೆನ್ನೂರು, ಮೇ 30- ಜಮ್ಮು ಕಾಶ್ಮೀರದಲ್ಲಿ ಕಳೆದ ವಾರ ನಡೆದ 45 ನೇ ರಾಷ್ಟ್ರಮಟ್ಟದ ಪಂಜ ಕುಸ್ತಿ ಸ್ಪರ್ಧೆಯಲ್ಲಿ ಕುಂಬಳೂರಿನ ಕಣ್ಣಾಳ್ ಕೆಂಚಪ್ಪ ಅವರು ಚಿನ್ನದ ಪದಕವನ್ನು ಪಡೆದಿದ್ದಾರೆ.

ನಾಗನರಸನಹಳ್ಳಿಯಲ್ಲಿ ಇಂದು

ದಾವಣಗೆರೆ ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನಾ ವಿಭಾಗ ಹಾಗೂ ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು (ಎಸ್.ಬಿ.ಸಿ.) ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ ಇವರುಗಳ ಸಂಯುಕ್ತಾಶ್ರಯದಲ್ಲಿ ವಿಶೇಷ ಶಿಬಿರವು ನಾಗರಸನಹಳ್ಳಿಯ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ.

ಇಂದು ಬೆಳಿಗ್ಗೆ 6.30 ಕ್ಕೆ ವೆಂಕಟರೆಡ್ಡಿ ಅವರಿಂದ ಧ್ವಜಾರೋಹಣ ನಡೆಯಲಿದೆ. ನಂತರ ಸಮಾರೋಪ ಸಮಾರಂಭ. ಅಧ್ಯಕ್ಷತೆ : ಡಾ. ಕೆ. ಷಣ್ಮುಖ.

ಮುಖ್ಯ ಅತಿಥಿಗಳು : ಡಾ. ಕೆ. ಶಿವಶಂಕರ್, ಡಾ. ಅಶೋಕ್‌ಕುಮಾರ್, ಎಂ.ಸಿ. ಗುರು, ಡಿ.ಹೆಚ್. ವಿರೂಪಾಕ್ಷಪ್ಪ, ಸುರೇಶ್, ಗೌಡರ ಚಂದ್ರಯ್ಯ, ಎಂ.ಪಿ. ಚನ್ನವೀರಪ್ಪ, ಸುರೇಶ್ ಬಿ.ಎಸ್., ಪ್ರಕಾಶ್ ಡಿ.ವಿ.

3 ರಂದು ವಿದೇಶ ವ್ಯಾಸಂಗ ಮಹಾಮೇಳ

ದಾವಣಗೆರೆ, ಮೇ 30- ನಗರದ ಐಎಂಎ ಹಾಲ್ ನಲ್ಲಿ ಕರಿಯರ್ ಗ್ಯಾನ್ ವತಿಯಿಂದ ಜೂನ್ 3 ರಂದು ವಿದೇಶ ವ್ಯಾಸಂಗ ಮಹಾಮೇಳ ಆಯೋಜಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಶಿವಕೃಷ್ಣ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಶಿವು, ವಿನಾಯಕ ಉಪಸ್ಥಿತರಿದ್ದರು.

ನಗರದಲ್ಲಿ ಇಂದು ಉದ್ಯೋಗ ಮೇಳ

ಜಿಎಂಐಟಿ ಪ್ಲೇಸ್ಮೆಂಟ್ ವಿಭಾಗದ ಸಹಯೋಗದೊಂದಿಗೆ ಜಿಎಂಎಸ್ ಅಕಾಡೆಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಉದ್ಯೋಗ ಮೇಳ ನಡೆಯಲಿದ್ದು, ಹತ್ತನೇ ತರಗತಿ ಪಾಸಾದ ವಿದ್ಯಾರ್ಥಿಗಳಿಂದ ಸ್ನಾತಕೋತ್ತರ ಪದವಿ ಪಡೆದ ಎಲ್ಲಾ ವಿದ್ಯಾರ್ಥಿಗಳೂ ಈ ಮೇಳದಲ್ಲಿ ಭಾಗವಹಿಸಬಹುದು. ಬೆಳಿಗ್ಗೆ 9.30ಕ್ಕೆ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಶೈಲ ಎಜುಕೇಶನಲ್ ಟ್ರಸ್ಟ್ ಖಜಾಂಚಿ ಜಿ. ಎಸ್. ಅನಿತ್‌ಕುಮಾರ್ ಮತ್ತು ದಾವಣಗೆರೆ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಬಿ.ಡಿ. ಕುಂಬಾರ್ ನೆರವೇರಿಸಲಿದ್ದಾರೆ.

ಶ್ರೀ ಕಾಳಿಕಾದೇವಿ ಸಮುದಾಯ ಭವನದ ಮೇಲ್ಛಾವಣಿ ಮಗುಚಿದೆ

ಮಲೇಬೆನ್ನೂರು ಮೇ 30 - ಸೋಮವಾರ ರಾತ್ರಿ ಬೀಸಿದ ಬಿರುಗಾಳಿ ಮಳೆಗೆ ಮಲೇಬೆನ್ನೂರು ಪಟ್ಟಣದ ಶ್ರೀ ಕಾಳಿಕಾ ದೇವಿ ಸಮುದಾಯ ಭವನದ ಮೇಲ್ಛಾವಣಿ ಮಗುಚಿ ಪಕ್ಕದ ಮನೆ ಮೇಲೆ ಬಿದ್ದಿದೆ. ಈ ಘಟನೆಯಿಂದ ಯಾರಿಗೂ ತೊಂದರೆ ಆಗಿಲ್ಲ ಎಂದು ಆನಂದಚಾರ್ ತಿಳಿಸಿದ್ದಾರೆ. ಸ್ಥಳಕ್ಕೆ ಪುರಸಭೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಕೆ12 ಟೆಕ್ನೋ ಸರ್ವೀಸಸ್ ಕಂಪನಿಗೆ ಜಿಎಂಐಟಿಯ ವಿದ್ಯಾರ್ಥಿಗಳು

ದಾವಣಗೆರೆ, ಮೇ 29 - ಇತ್ತೀಚಿಗೆ ನಡೆದ ಕೆ 12 ಟೆಕ್ನೋ ಸರ್ವೀಸಸ್ ಕಂಪನಿಯ ಸಂದರ್ಶನ ಪ್ರಕ್ರಿಯೆಯಲ್ಲಿ ಜಿಎಂಐಟಿ ಕಾಲೇಜಿನ ಎಂಬಿಎ ವಿಭಾಗದಿಂದ 11 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಆಯ್ಕೆಯಾದ ವಿದ್ಯಾರ್ಥಿಗಳಾದ ಕೆ. ಅಭಿಷೇಕ್, ಎನ್.ಬಿ. ದೇವರಾಜ್, ಹೆಚ್.ಎಂ. ಮಂಜುನಾಥ, ಕೆ.ಪಿ. ಪದ್ಮಶ್ರೀ, ಡಿ. ಪ್ರಸಾದ್, ಎನ್. ರಕ್ಷಾ, ಎಂ. ಪ್ರಿಯಾಂಕಾ, ಡಿ.ಆರ್. ಕೊಟ್ರೇಶ್, ರವಿ ಕಿರಣ ಎಸ್ವಿ, ಸ್ವಪ್ನ, ಎಸ್.ಎಂ. ವಚನ ಅವರಿಗೆ ಕಾಲೇಜಿನ ಛೇರ್ಮನ್ ಜಿ.ಎಂ. ಲಿಂಗರಾಜು, ಆಡಳಿತಾಧಿಕಾರಿ ವೈ.ಯು. ಸುಭಾಷ್‌ಚಂದ್ರ, ಪ್ರಾಂಶುಪಾಲ ಡಾ. ಎಂ.ಬಿ. ಸಂಜಯ್ ಪಾಂಡೆ, ಎಂಬಿಎ ವಿಭಾಗದ ನಿರ್ದೇಶಕ ಡಾ. ಬಿ. ಬಕ್ಕಪ್ಪ, ಎಂಬಿಎ ವಿಭಾಗದ ಮುಖ್ಯಸ್ಥ ಡಾ. ಪಿ.ಎಸ್. ಬಸವರಾಜ್, ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ಟಿ.ಆರ್. ತೇಜಸ್ವಿ ಕಟ್ಟಿಮನಿ, ವಿಭಾಗದ ಪ್ಲೇಸ್‌ಮೆಂಟ್ ಸಂಯೋಜಕ ಪ್ರೊ. ವಿನಯ್ ಮತ್ತು ಪ್ರಾಧ್ಯಾಪಕ ವರ್ಗದವರು ಅಭಿನಂದಿಸಿದ್ದಾರೆ.

WALK-IN INTERVIEW
MARKETING EXECUTIVE (MALE) Ideal ICE CREAM
for IDEAL ICE CREAM in & around DAVANAGERE with Good Communication Skills & owning a Two Wheeler
Preference will be given to candidates with experience in FMCG
Walk-in-interview on 02.06.2023, 10.00 am to 5.00 pm
at Sri Associates, 12/B, KIADB Lokikere Road, Davanagere Industrial Area.
CONTACT
9480316177 | 8277537950

WANTED
Required
Sales Men & Sales Girls
to work in cloth Store.
Interested can Apply with proper Resume along with Passport Size Photo Attested.
ASHUJI DISTRIBUTORS
#323, Binny Company Road, Davanagere.

ಇಂದು ನಿವೃತ್ತಿ-ಧನ್ಯವಾದಗಳು

ಬಾಪೂಜಿ ಸಹಕಾರ ಬ್ಯಾಂಕಿನಲ್ಲಿ ನಾನು 33 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ, ಇಂದು (31.05.2023) ನಿವೃತ್ತಿಯಾಗುತ್ತಿದ್ದೇನೆ. ಬ್ಯಾಂಕಿನ ಆಡಳಿತ ಮಂಡಳಿಯವರಿಗೂ, ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ ಮತ್ತು ಪ್ರೀತಿಯ ಗ್ರಾಹಕರಿಗೂ ಹೃತ್ಪೂರ್ವಕ ಧನ್ಯವಾದಗಳು...
ಡಿ.ಜಿ.ರವಿಶಂಕರ್, ಮ್ಯಾನೇಜರ್
ಬಾಪೂಜಿ ಕೋ.ಆಪ್. ಬ್ಯಾಂಕ್ ಲಿ. ಬಿಐಇಟಿ ಶಾಖೆ
ದಾವಣಗೆರೆ. ಫೋನ್ : 81473 73806

ಇಂದು ನಿವೃತ್ತಿ-ಧನ್ಯವಾದಗಳು

ನಾನು ಬಾಪೂಜಿ ಸಹಕಾರ ಬ್ಯಾಂಕಿನಲ್ಲಿ ವಿವಿಧ ಹುದ್ದೆಗಳಲ್ಲಿ 36 ವರ್ಷ 2 ತಿಂಗಳು 12 ದಿವಸ ಸುದೀರ್ಘ ಸೇವೆ ಸಲ್ಲಿಸಿ,ಇಂದು (31.05.2023) ನಿವೃತ್ತಿಯಾಗುತ್ತಿದ್ದೇನೆ. ಬ್ಯಾಂಕಿನ ಆಡಳಿತ ಮಂಡಳಿಗೂ, ಬ್ಯಾಂಕಿನ ಸಿಬ್ಬಂದಿಗೂ ಹಾಗೂ ನೆಚ್ಚಿನ ಗ್ರಾಹಕರಿಗೂ ಅನಂತಾನಂತ ಧನ್ಯವಾದಗಳು...
ಜಿ.ಓ. ಶಂಕ್ರಪ್ಪ, ಮ್ಯಾನೇಜರ್
ಬಾಪೂಜಿ ಕೋ.ಆಪ್. ಬ್ಯಾಂಕ್, ಕೆ.ಆರ್. ಮಾರ್ಕೆಟ್ ಶಾಖೆ
ದಾವಣಗೆರೆ. ಫೋನ್ : 85536 58444

ವಿದೇಶ ಪ್ರವಾಸ ಶುಭಾಶಯಗಳು

ಮಂಜುನಾಥ್ ಸಿ.ಜೆ.
ಇವರು ಇಂದು (31.05.2023) ರಂದು ವಿದೇಶ ಪ್ರವಾಸ ಕೈಗೊಳ್ಳಲಿದ್ದಾರೆ.
ಇವರ ಪ್ರಯಾಣ ಸುಖಕರವಾಗಿರಲೆಂದು ಶುಭ ಹಾರೈಸುತ್ತೇವೆ.
ಮಹೇಶ್ವರಯ್ಯ, ಸಂಗಪ್ಪ ಮಲ್ಲಪ್ಪ ಚಿತ್ತರಗಿ
ಹೆಚ್. ಹಾಲೇಶಪ್ಪ, ಡಿ.ಹೆಚ್. ಚನ್ನಬಸಪ್ಪ
ನಿವೃತ್ತ ಸಹಾಯಕ ಕೃಷಿ ಅಧಿಕಾರಿ, 4ನೇ ಮೇನ್, 2ನೇ ಕ್ರಾಸ್, ಡಿಸಿಎಂ ಟೌನ್‌ಶಿಪ್, ದಾವಣಗೆರೆ.

ವಿಕೋಪ ಕಾಲಕ್ಕೊಂದು ತುರ್ತು ಪಾವತಿ ವ್ಯವಸ್ಥೆ : ಆರ್.ಬಿ.ಐ. ನಿರ್ಧಾರ

ಮುಂಬೈ, ಮೇ 30 – ವಿಕೋಪ ಕಾಲ ಹಾಗೂ ಯುದ್ಧದಂತಹ ಪರಿಸ್ಥಿತಿಗಳಲ್ಲಿ ಬಳಸಲು ಸಾಧ್ಯವಾಗುವಂತಹ ಪಾವತಿ ವ್ಯವಸ್ಥೆಯನ್ನು ರೂಪಿಸಲು ರಿಸರ್ವ್ ಬ್ಯಾಂಕ್ ನಿರ್ಧರಿಸಿದೆ.

ಸರಳ ಹಾಗೂ ಸಂಚಾರಿ ಪಾವತಿ ವ್ಯವಸ್ಥೆ (ಎಲ್.ಪಿ.ಎಸ್.ಎಸ್.) ಮೂಲಕ ತುರ್ತು ಸಂದರ್ಭದಲ್ಲಿ ಕನಿಷ್ಠ ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸಲು ಸಾಧ್ಯವಾಗುವ ವ್ಯವಸ್ಥೆ ರೂಪಿಸಲಾಗುವುದು.

ಪ್ರಸಕ್ತ ಆರ್.ಟಿ.ಜಿ.ಎಸ್., ನೆಫ್ಟ್ ಹಾಗೂ ಯು.ಪಿ.ಐ. ಮೂಲಕ ದೊಡ್ಡ ಪ್ರಮಾಣದ ಮೊತ್ತಗಳನ್ನು ನಿರ್ವಹಿಸಲಾಗುತ್ತದೆ. ಈ ವ್ಯವಸ್ಥೆಗಳು ಸಂಕೀರ್ಣ ಜಾಲ ಹಾಗೂ ಆಧುನಿಕ ತಂತ್ರಾಂಶ ಸೌಲಭ್ಯಗಳನ್ನು ಅವಲಂಬಿಸಿವೆ.

ಆದರೆ, ನೈಸರ್ಗಿಕ ವಿಕೋಪ ಹಾಗೂ ಯುದ್ಧದಂತಹ ಸಂದರ್ಭಗಳಲ್ಲಿ ಈ ಪಾವತಿ ವ್ಯವಸ್ಥೆಗಳು ತಾತ್ಕಾಲಿಕವಾಗಿ ಸ್ಥಗಿತವಾಗುತ್ತವೆ. ಹೀಗಾಗಿ ತುರ್ತು ಸಂದರ್ಭಗಳಲ್ಲೂ ಬಳಸಲು ಸಾಧ್ಯವಾಗಬಹುದಾದ ಪಾವತಿ ವ್ಯವಸ್ಥೆಯ ಅಗತ್ಯವಿದೆ ಎಂದು ರಿಸರ್ವ್ ಬ್ಯಾಂಕ್ ತನ್ನ ವಾರ್ಷಿಕ ವರದಿಯಲ್ಲಿ ತಿಳಿಸಿದೆ.

ಈ ಹಿನ್ನೆಲೆಯಲ್ಲಿ ಎಲ್.ಪಿ.ಎಸ್.ಎಸ್. ಎಂಬ ವ್ಯವಸ್ಥೆಯನ್ನು ಸಾಂಪ್ರದಾಯಿಕ ತಂತ್ರಜ್ಞಾನಕ್ಕಿಂತ ಸ್ವತಂತ್ರವಾಗಿ ರೂಪಿಸಲಾಗುವುದು. ಇದನ್ನು ಕನಿಷ್ಠ ಸಿಬ್ಬಂದಿಯೊಂದಿಗೆ ಎಲ್ಲಿ ಬೇಕಾದರೂ ನಿರ್ವಹಿಸಬಹುದು.

ಕನಿಷ್ಠ ಹಾರ್ಡ್‌ವೇರ್ ಹಾಗೂ ಸಾಫ್ಟ್‌ವೇರ್‌ಗಳೊಂದಿಗೆ ಈ ವ್ಯವಸ್ಥೆ ಮೂಲಭೂತ ಅಗತ್ಯಗಳನ್ನು ಈಡೇರಿಸಲಿದೆ. ಇದು ಸರ್ಕಾರ ಹಾಗೂ ಮಾರುಕಟ್ಟೆ ಸಂಬಂಧಿತ ಕಾರ್ಯನಿರ್ವಹಣೆಯಲ್ಲಿ ಸ್ಥಿರತೆ ತರುತ್ತದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

ತಾಯ್ತನ ಘನತೆ ಹಕ್ಕು, ವಿದ್ಯಾರ್ಥಿನಿ ಹೆರಿಗೆ ರಜೆ ಪಡೆಯಲು ಕೋರ್ಟ್ ಅನುಮತಿ

ನವದೆಹಲಿ, ಮೇ 30 – ತಾಯ್ತನ ಘನತೆಯ ಹಕ್ಕಾಗಿದೆ ಎಂದು ಹೇಳಿರುವ ದೆಹಲಿ ಹೈಕೋರ್ಟ್, ಎಂ.ಎಡ್. ವಿದ್ಯಾರ್ಥಿನಿಯೊಬ್ಬರು ಹೆರಿಗೆ ರಜೆ ಪಡೆಯಲು ಅನುಮತಿ ನೀಡಿದೆ.

ಚೌಧರಿ ಚರಣ್ ಸಿಂಗ್ ವಿಶ್ವವಿದ್ಯಾ ನಿಲಯದ ವಿದ್ಯಾರ್ಥಿನಿಯೊಬ್ಬರು ಹೆರಿಗೆ ರಜೆಗಾಗಿ ಮನವಿ ಸಲ್ಲಿಸಿದ್ದರು. ವಿಶ್ವವಿದ್ಯಾನಿಲಯ ಮನವಿ ತಳ್ಳಿ ಹಾಕಿದ ನಂತರ ಅವರು ಹೈಕೋರ್ಟ್ ಮೊರೆ ಹೋಗಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪುರುಶೇಂದ್ರ ಕುಮಾರ್ ಕೌರವ್, ಜನ್ಮ ನೀಡುವ ಆಯ್ಕೆ ಮಹಿಳೆಯ ಖಾಸಗಿತನ ಹಾಗೂ ಘನತೆಯ ಹಕ್ಕಾಗಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ತಾಯ್ತನದ ರಜೆ ಪಡೆಯುವುದು ಘನತೆಯ ಹಕ್ಕಿನ ಅವಿಭಾಜ್ಯ ಅಂಗವಾಗಿದೆ ಎಂದು ಹೇಳಿದ್ದಾರೆ.

ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಶೇ.80ರಷ್ಟು ಥಿಯರಿ ತರಗತಿಗಳಿಗೆ ಹಾಜರಾಗುವುದು ಕಡ್ಡಾಯವಾಗಿದೆ. 59 ದಿನಗಳ ಹೆರಿಗೆ ರಜೆಗೆ ಅನುಮತಿ ನೀಡುವ ಬಗ್ಗೆ ವಿಶ್ವವಿದ್ಯಾನಿಲಯ ಪರಿಗಣಿಸಬೇಕು. ರಜೆ ನೀಡಿದರೆ ಮಹಿಳೆ ಪರೀಕ್ಷೆ ಬರೆಯಲು ಸಾಧ್ಯವಾಗಲಿದೆ ಎಂದು ಹೈಕೋರ್ಟ್ ಹೇಳಿದೆ. ತಾಯ್ತನ ಹಾಗೂ ಶಿಕ್ಷಣದ ಹಕ್ಕಿನ ನಡುವೆ ಆಯ್ಕೆ ಮಾಡಿಕೊಳ್ಳುವಂತೆ ನಾಗರಿಕರ ಮೇಲೆ ಒತ್ತಡ ಹೇರಲಾಗದು ಎಂದೂ ನ್ಯಾಯಾಲಯ ಹೇಳಿದೆ.

ಇಂಜಿನಿಯರಿಂಗ್ ವಿದ್ಯಾರ್ಥಿಗಳು ದೇಶದ ಆಸ್ತಿ

ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ 'ಮಲ್ಲಿಕಾ-2023' ಉತ್ಸವದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ

ದಾವಣಗೆರೆ, ಮೇ 30- ದುಡ್ಡೇ ದೊಡ್ಡಪ್ಪ ಆದರೆ ವಿದ್ಯೆ ಅದರಪ್ಪ. ವಿದ್ಯೆಯಿಂದ ಏನೆಲ್ಲಾ ಸಾಧಿಸಲು ಸಾಧ್ಯವಿದೆ. ಇಂಜಿನಿಯರ್‌ಗಳು ಈ ದೇಶದ ಆಸ್ತಿ. ಕಲಿತ ವಿದ್ಯೆ, ಪಡೆದ ಉದ್ಯೋಗದ ಮೂಲಕ ಸಮಾಜಕ್ಕೆ ಕೊಡುಗೆ ನೀಡುವ ಅಗತ್ಯವಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಜಿ. ಮಲ್ಲಿಕಾರ್ಜುನಪ್ಪ ತೆರೆದ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ 'ಮಲ್ಲಿಕಾ-2023' ಉತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದೆ ಕೇವಲ ಉಳ್ಳವರ ಮಕ್ಕಳಷ್ಟೇ ಇಂಜಿನಿಯರಿಂಗ್, ವೈದ್ಯಕೀಯದಂತಹ ತಾಂತ್ರಿಕ ಹಾಗೂ ಉನ್ನತ ಶಿಕ್ಷಣ ಪಡೆಯುತ್ತಿದ್ದರು. ಆದರೀಗ ಕೂಲಿಕಾರರ ಮಕ್ಕಳೂ ಸಹ ಪದವೀಧರರಾಗಿ ಉನ್ನತ ಹುದ್ದೆಗಳನ್ನು ಅಲಂಕರಿಸುತ್ತಿದ್ದಾರೆ. ವಿದ್ಯಾರ್ಥಿಗಳು ಜೀವನದಲ್ಲಿ ಓದುವ ಛಲ, ಸಾಧಿಸುವ ಗುರಿ ಇದ್ದರೆ ಉತ್ತಮ ವ್ಯಕ್ತಿಯಾಗಲು ಸಾಧ್ಯವಿದೆ ಎಂದರು.

ನಾಗಾಲೋಟದಲ್ಲಿ ಸಾಗುತ್ತಿರುವ ದೇಶದಲ್ಲಿ ಶಿಕ್ಷಣ, ವಿಜ್ಞಾನಕ್ಕೆ ಹೆಚ್ಚು ಆದ್ಯತೆ ಕೊಡಲಾಗಿದೆ. ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ಸಹ ಸಂಶೋಧನೆ, ಚಿಂತನೆ ಹಾಗೂ ದೇಶದ ಅಭಿವೃದ್ಧಿ ಬಗ್ಗೆ ಹೆಚ್ಚು ಒಲವು ತೋರಬೇಕೆಂದು ಹಿತ ನುಡಿದರು.

ದಾವಣಗೆರೆ ವಿದ್ಯಾಕಾಶಿಯಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ ನಗರವಾಗಿದೆ. ರಾಜ್ಯದಲ್ಲಿ 124, ದೇಶದಲ್ಲಿ 1500 ಇಂಜಿನಿಯರಿಂಗ್ ಕಾಲೇಜುಗಳಿವೆ. ಈ ಕಾಲೇಜುಗಳಿಂದ ಹೊರಹೊಮ್ಮುವ ಇಂಜಿನಿಯರ್‌ಗಳು ದೇಶದ ಆಸ್ತಿ ಎಂದರು.

ಜಿಎಂಐಟಿ ಕಾಲೇಜಿನಲ್ಲಿ 2200 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಪ್ರತಿ ವರ್ಷ ವಿದ್ಯಾರ್ಥಿನಿಯರೇ ರ‍್ಯಾಂಕ್ ಜೊತೆಗೆ ಬಂಗಾರದ ಪದಕ ಪಡೆಯುತ್ತಿದ್ದಾರೆ.

ಈ ಬಾರಿ ನಾಲ್ವರು ರ‍್ಯಾಂಕ್, ಬಂಗಾರದ ಪದಕ ಹಾಗೂ 2.25 ಲಕ್ಷ ರೂ. ವಿದ್ಯಾರ್ಥಿ ವೇತನದ ಮೂಲಕ ಶುಲ್ಕ ಹಿಂಪಡೆದಿದ್ದಾರೆ. ಶೇ. 90 ಕ್ಕಿಂತ ಅಧಿಕ ಅಂಕ ಪಡೆದ ಐವರು ವಿದ್ಯಾರ್ಥಿನಿಯರು ಕೂಡ ಬಂಗಾರದ ಪದಕಕ್ಕೆ ಭಾಜನರಾಗಿರುವುದು ನಮ್ಮ ಸಂತೋಷವನ್ನು ಇಮ್ಮಡಿಗೊಳಿಸಿದೆ. ಆದರೆ ವಿದ್ಯಾರ್ಥಿಗಳಲ್ಲಿ ಒಬ್ಬರೂ ಬಂಗಾರದ ಪದಕ ಪಡೆಯದಿರುವುದಕ್ಕೆ ಬೇಸರವಿದೆ ಎಂದರು.

ನಟ, ಕಲಾ ನಿರ್ದೇಶಕ ಅರುಣ್ ಸಾಗರ್ ಮಾತನಾಡಿ, ವಿದ್ಯಾರ್ಥಿಗಳ ಜೀವನದಲ್ಲಿ ವಿದ್ಯಾದಾನ ಎಲ್ಲಕ್ಕಿಂತ ಮಿಗಿಲಾದುದು. ಇಂತಹ ಕಾರ್ಯದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರರವರು ಸಲ್ಲಿಸುತ್ತಿರುವ ಸೇವೆ ಮಹತ್ತರವಾದುದು. ಒಬ್ಬ ರಾಜಕಾರಣಿಯಾಗಿದ್ದರೂ ಸಮಾಜ ಸೇವಾ ಕಾರ್ಯ ಶ್ಲಾಘನೀಯ ಎಂದರು.

ಇದೇ ವೇಳೆ ನಾಲ್ವರು ವಿದ್ಯಾರ್ಥಿನಿಯರು ಇಂಜಿನಿಯರಿಂಗ್‌ನಲ್ಲಿ ರ‍್ಯಾಂಕ್ ಜೊತೆಗೆ ಎರಡು ಲಕ್ಷ ಇಪ್ಪತ್ತೈದು ಸಾವಿರದ ಆರು ನೂರು ರೂ.ಗಳನ್ನು ನಾಲ್ಕು ವರ್ಷದ ಬೋಧನಾ ಶುಲ್ಕವನ್ನು ಹಿಂಪಡೆದಿದ್ದಾರೆ. ಇದರೊಟ್ಟಿಗೆ ಬಂಗಾರದ ಪದಕವನ್ನು ಹಾಗೂ ಶೇ. 90 ರಷ್ಟು ಅಂಕ ಗಳಿಸುವ ಮೂಲಕ ಬಂಗಾರದ ಪದಕ ಪಡೆದರು.

ಕಾಲೇಜಿನ ಪಿಹೆಚ್‌ಡಿ ಪದವಿ ಪಡೆದ ಅಧ್ಯಾಪಕರುಗಳಾದ ಡಾ. ನಿರಂಜನಮೂರ್ತಿ, ಡಾ. ಹರೀಶ್, ಡಾ. ಹನುಮೇಶ್ ಅವರುಗಳನ್ನು ಗೌರವಿಸಲಾಯಿತು.

ಶ್ರೀಶೈಲ ಎಜುಕೇಶನಲ್ ಟ್ರಸ್ಟ್ ಕಾರ್ಯದರ್ಶಿ ಜಿ.ಎಂ. ಲಿಂಗರಾಜ್, ಖಜಾಂಚಿ ಜಿ.ಎಸ್. ಅನಿತ್ ಕುಮಾರ್, ಪ್ರೊ. ಬಕ್ಕಪ್ಪ, ದಾವಣಗೆರೆ ಕ್ಯಾನ್ಸರ್ ಫೌಂಡೇಶನ್ ರಾಯಭಾರಿ, ಕಲಾವಿದ ಆರ್.ಟಿ. ಅರುಣ್ ಕುಮಾರ್, ಯುವ ಮುಖಂಡ ಜಯಪ್ರಕಾಶ್ ಕೊಂಡಜ್ಜಿ, ಕಾಲೇಜಿನ ಆಡಳಿತಾಧಿಕಾರಿ ಸುಭಾಷ್, ಪ್ರಾಚಾರ್ಯ ಡಾ. ಸಂಜಯ್ ಪಾಂಡೆ, ನಾಸೀರ್ ಅಹಮದ್, ಡಾ. ಪಿ.ಎಸ್. ಬಸವರಾಜ್, ಡಾ. ಭರತ್ ರಾಜ್, ಕಿರಣ್ ಕುಮಾರ್, ಸುನೀಲ್ ಕುಮಾರ್, ಓಂಕಾರಪ್ಪ, ಪ್ರವೀಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಂತರ ಕಲಾವಿದ ಅರುಣ್ ಸಾಗರ್ ಅವರಿಂದ ಮನರಂಜನೆ ಹಾಗೂ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

1ರಿಂದ ಹಂತ ಹಂತವಾಗಿ ಗ್ಯಾರಂಟಿ ಜಾರಿ: ಹೆಚ್.ಬಿ. ಮಂಜಪ್ಪ

ದಾವಣಗೆರೆ, ಮೇ 30- ಕಾಂಗ್ರೆಸ್ ಪಕ್ಷ ನುಡಿದಂತೆ ಹಿಂದೆಯೂ ನಡೆದಿದೆ, ಮುಂದೆಯೂ ನಡೆಯಲಿದೆ. ಜೂನ್ 1 ರಿಂದ ಹಂತ-ಹಂತವಾಗಿ 5 ಗ್ಯಾರಂಟಿಗಳನ್ನು ಜಾರಿಗೆ ತರಲಿದ್ದು, ಪಕ್ಷದ ಕಾರ್ಯಕರ್ತರು ಗ್ಯಾರಂಟಿ ಯೋಜನೆಗಳನ್ನು ಅರ್ಹರಿಗೆ ತಲುಪುವಂತೆ ಮಾಡಬೇಕೆಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಮನವಿ ಮಾಡಿದರು.

ಜಿಲ್ಲಾ ಕಾಂಗ್ರೆಸ್ ವತಿಯಿಂದ ಪಕ್ಷದ ಕಛೇರಿಯಲ್ಲಿ ದಾವಣಗೆರೆ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾದ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರ ಅಭೂತಪೂರ್ವ ಗೆಲುವಿಗೆ ಕಾರಣಕರ್ತರಾದ ಕಾರ್ಯಕರ್ತರಿಗೆ ಇಂದು ಹಮ್ಮಿಕೊಂಡಿದ್ದ ಕೃತಜ್ಞತಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಬಿಜೆಪಿಗರು ಸೋತು ಹತಾಶೆ ಭಾವನೆಯಿಂದ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಬಿಜೆಪಿ ತಟ್ಟೆಯಲ್ಲಿ ಹೆಗ್ಗಣವೇ ಬಿದ್ದಿದೆ. ಅದನ್ನು ನೋಡಿಕೊಳ್ಳದೇ ಮತ್ತೊಬ್ಬರ ತಟ್ಟೆಯಲ್ಲಿ ಏನು ಬಿದ್ದಿದೆ ಎಂಬುದರ ಬಗ್ಗೆ ಚಿಂತೆ ಅವರದ್ದು. ಕೇಂದ್ರ ಅಧಿಕಾರಕ್ಕೆ ಬರುವ ಮುನ್ನ ಬಿಜೆಪಿಗರು ಪ್ರತಿಯೊಬ್ಬರ ಖಾತೆಗೂ 15 ಲಕ್ಷ, 2 ಕೋಟಿ ಉದ್ಯೋಗದಂತಹ ಭರವಸೆಗಳನ್ನು ನೀಡಿ ಇಂದಿಗೂ ಸಹ ಒಂದೇ ಒಂದು ಭರವಸೆ ಈಡೇರಿಸದ ಬಿಜೆಪಿಯವರು ಕಾಂಗ್ರೆಸ್ ಪಕ್ಷದ ಗ್ಯಾರಂಟಿಯನ್ನು ಪ್ರಶ್ನಿಸುತ್ತಿದ್ದಾರೆ ಎಂದರು.

ಕೆಪಿಸಿಸಿ ಸದಸ್ಯ ಮುದೇಗೌಡ್ರು ಗಿರೀಶ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಶ್ರಮದಿಂದ ಇಂದು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದ್ದು, ಅರ್ಹರನ್ನು ಗುರುತಿಸಿ ಅಧಿಕಾರ ನೀಡಲಾಗುವುದು. ಮುಂದಿನ ದಿನಗಳಲ್ಲಿ ಬರುವ ಎಲ್ಲಾ ಚುನಾವಣೆಗಳಲ್ಲೂ ಪಕ್ಷ ಅಭೂತಪೂರ್ವ ಗೆಲುವು ದಾಖಲಿಸಬೇಕೆಂದು ಕರೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಕಾಂಗ್ರೆಸ್ ಪಕ್ಷದ ಗೆಲುವಿಗೆ ಕಾರ್ಯಕರ್ತರ ಶ್ರಮವೇ ಕಾರಣ. ಕಳೆದ 5 ವರ್ಷಗಳಿಂದ ಪಕ್ಷದ ಪರವಾಗಿ ಕೆಲಸ ಮಾಡಿದ ಕಾರ್ಯಕರ್ತರನ್ನು ಜಿಲ್ಲಾಧ್ಯಕ್ಷರು ಗುರುತಿಸಿ, ವಿವಿಧ ಇಲಾಖೆಗಳಿಗೆ ನಾಮನಿರ್ದೇಶನ ನೀಡಬೇಕೆಂದು ಆಗ್ರಹಿಸಿದರು.

ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರ ಗೆಲುವಿನಲ್ಲಿ ಅವರ ಕುಟುಂಬ ವರ್ಗದ ಪಾತ್ರವೂ ಇದೆ. ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಶ್ರೀಮತಿ ರೇಖಾ ಗಣೇಶ್, ಎಸ್.ಎಸ್. ಬಕ್ಕೇಶ್, ಎಸ್.ಎಸ್. ಗಣೇಶ್, ಸಮರ್ಥ್ ಶಾಮನೂರು, ಶ್ರೇಷ್ಠ ಶಾಮನೂರು ಸೇರಿದಂತೆ, ಕುಟುಂಬದ ಎಲ್ಲರೂ ಶ್ರಮಿಸಿದ್ದಾರೆ ಎಂದು ದಿನೇಶ್ ಕೆ.ಶೆಟ್ಟಿ ಶ್ಲಾಘಿಸಿದ್ದಾರೆ.

ಪರಿಶಿಷ್ಟ ಜಾತಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಹೆಚ್.ವೀರಭದ್ರಪ್ಪ ಮಾತನಾಡಿ, ಪಕ್ಷಕ್ಕಾಗಿ ದುಡಿದವರನ್ನು ಗುರುತಿಸುವಂತಹ ಕೆಲಸಗಳಾಗಲೀ ಎಂದರು.

ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಅನಿತಾಬಾಯಿ ಮಾಲತೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳ ಬಗ್ಗೆ ಮಹಿಳಾ ಕಾರ್ಯಕರ್ತರು ಮನೆ-ಮನೆಗೆ ತಲುಪಿಸುವಂತಹ ಕೆಲಸ ಮಾಡಿದ್ದು, ಮುಂದಿನ ದಿನಗಳಲ್ಲಿ ಅವರಿಗೆ ಪ್ರಾಶಸ್ತ್ಯ ನೀಡಬೇಕೆಂದು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಕೆ.ಜಿ.ಶಿವಕುಮಾರ್ ಮತ್ತು ಅಯೂಬ್ ಪೈಲ್ವಾನ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಪರಿಶ್ರಮದಿಂದಾಗಿ ದಾವಣಗೆರೆ ಜಿಲ್ಲೆಯ 7 ಕ್ಷೇತ್ರಗಳ ಪೈಕಿ 6 ಕ್ಷೇತ್ರಗಳಲ್ಲಿ ಪಕ್ಷ ಗೆಲುವು ಸಾಧಿಸಿದ್ದು, ಕೆಲವು ಭಾಗಗಳಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ಮತಗಳು ಬಂದಿಲ್ಲ. ಆ ಭಾಗದ ಕಾರ್ಯಕರ್ತರು ಇನ್ನು ಹೆಚ್ಚಿನದಾಗಿ ಕೆಲಸ ಮಾಡಬೇಕೆಂದು ಕರೆ ನೀಡಿದರು.

ಎಸ್ಸೆಸ್-ಎಸ್ಸೆಸ್ಸೆಂ ಗೆಲುವು ಹಿನ್ನೆಲೆ: ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸಿದ ಜಿಲ್ಲಾ ಕಾಂಗ್ರೆಸ್

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಾದ ಎಸ್. ಮಲ್ಲಿಕಾರ್ಜುನ್, ಎ.ನಾಗರಾಜ್, ಪ್ರಚಾರ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್, ನಿವೃತ್ತ ಕಾರ್ಯಪಾಲಕ ಅಭಿಯಂತರ ಆನಂದಪ್ಪ, ಎನ್.ಜೆ. ನಿಂಗಪ್ಪ, ರಾಮಚಂದ್ರ, ಅಡಾಣಿ ಸಿದ್ದಪ್ಪ, ಸುರೇಶ್, ಯುವ ಕಾಂಗ್ರೆಸ್‌ನ ಸಾಗರ್, ರಹಮತ್ ಅಲಿ, ಕೊಡಪಾನ ದಾದಾಪೀರ್, ಸುಭಾನ್, ಹರೀಶ್ ಬಸಾಪುರ, ರಾಜೇಶ್ವರಿ, ಶುಭ ಮಂಗಳ, ರಂಗನಾಥ ಸ್ವಾಮಿ, ಹರೀಶ್, ಶಿರಮನಹಳ್ಳಿ ರುದ್ರೇಶ್, ಆರನೇಕಲ್ಲು ಮಂಜಪ್ಪ, ಡೋಲಿ ಚಂದ್ರು ಮತ್ತಿತರರಿದ್ದರು.

ಭದ್ರಾ ಕಾಲುವೆ ಸರ್ವೇ ಆರಂಭ

ದಾವಣಗೆರೆ, ಮೇ 30- ಭದ್ರಾ ಯೋಜನೆಯ ಕಾಲುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಹರಿಹರ, ಚನ್ನಗಿರಿ, ಹೊನ್ನಾಳಿ ಮತ್ತು ಭದ್ರಾವತಿ ತಾಲ್ಲೂಕಿನಲ್ಲಿ ಭದ್ರಾ ಯೋಜನೆಯ ಮಲೇಬೆನ್ನೂರು ಮತ್ತು ಆನವೇರಿ ಶಾಖಾ ಕಾಲುವೆ ಜಾಲಗಳು ಹಾದು ಹೋಗಿರುವ ಜಮೀನುಗಳಿಗೆ ಸಂಬಂಧಪಟ್ಟಂತೆ ಸರ್ವೆ ಕಾರ್ಯ ಕೈಗೊಳ್ಳಲಾಗಿದೆ.

ಹರಿಹರ ತಾಲ್ಲೂಕಿಗೆ ಸಂಬಂಧಿಸಿದಂತೆ ಬಸವಾಪಟ್ಟಣ ಮತ್ತು ಮಲೇಬೆನ್ನೂರು, ಕನೀನಿನಿ ನಂ.1 ಮತ್ತು 3 ಭದ್ರಾ ನಾಲಾ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದಂತೆ ಬಸವಪಟ್ಟಣ, ಕನೀನಿನಿ ನಂ1 ಭದ್ರಾ ನಾಲಾ ಉಪ

ಭಾಗದ ಸಹಾಯಕ ಕಾರ್ಯ ಪಾಲಕ ಇಂಜಿನಿಯರ್, ಹೊನ್ನಾಳಿ ತಾಲ್ಲೂಕಿಗೆ ಬಸವಾಪಟ್ಟಣ ಮತ್ತು ಸಾಸ್ವೇಹಳ್ಳಿ, ಕನೀನಿನಿ ನಂ.1 ಮತ್ತು 4 ಭದ್ರಾ ನಾಲಾ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಭದ್ರಾವತಿ ತಾಲ್ಲೂಕಿಗೆ ಸಾಸ್ವೇಹಳ್ಳಿ, ಕನೀನಿನಿ ನಂ.4 ಭದ್ರಾ ನಾಲಾ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸರ್ವೇ ಪ್ರಾರಂಭಿಸಿದ್ದಾರೆ ಎಂದು ಮಲೇಬೆನ್ನೂರು ಕಾರ್ಯಪಾಲಕ ಇಂಜಿನಿಯರ್ ಜಿ.ಎಸ್ ಪಾಟೀಲ್ ತಿಳಿಸಿದ್ದಾರೆ.

Estd : 2009
ವಿದ್ಯಾವೃಕ್ಷ ಎಜುಕೇಷನಲ್ ಟ್ರಸ್ಟ್ (ರಿ.)
ಎಕ್ಸಲ್ ಆರೇಂಜ್ ಟಾಟ್ಸ್
Excel ORANGE TOTS
1st Branch #1680/8, 12th Cross Siddaveerappa Layout, Davangere
Mob : 94825 44828
2nd Branch #306 & 308 Dixit Road Raghavendra Swamy Temple Lane, Davangere
Admissions Open For
PRE-NURSERY, NURSERY, JUNIOR KG, SENIOR KG & DAY CARE

ಕೇಂದ್ರದ ಉನ್ನತ ಹುದ್ದೆಗಳಿಗೆ ಖಾಸಗಿ ವಲಯದ 17 ಪರಿಣಿತರ ಸೇರ್ಪಡೆ

ನವದೆಹಲಿ, ಮೇ 30 – ಖಾಸಗಿ ವಲಯದ 17 ಪರಿಣಿತರನ್ನು ಸರ್ಕಾರದ ಉನ್ನತ ಹುದ್ದೆಗಳಿಗೆ ನೇಮಿಸಿಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದೆ.

ಆರು ಇಲಾಖೆಗಳಲ್ಲಿ ಜಂಟಿ ಕಾರ್ಯದರ್ಶಿ, ನಿರ್ದೇಶಕರು ಹಾಗೂ ಉಪನಿರ್ದೇಶಕರ ಹುದ್ದೆಗಳಿಗೆ ಇವರನ್ನು ಹಂಗಾಮಿಯಾಗಿ ಸೇರ್ಪಡೆ ಮಾಡಿಕೊಳ್ಳಲಾಗುವುದು.

ನರೇಂದ್ರ ಮೋದಿ ಸರ್ಕಾರ 2018ರಿಂದ ಈ ರೀತಿಯ ನೇಮಕಾತಿಗಳಿಗೆ ಅವಕಾಶ ನೀಡಿದೆ. ನಾಲ್ಕನೇ ಬಾರಿ ಪರಿಣಿತರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.

ಡಾ.ಪುಟ್ಟರಾಜ ಸೇವಾ ಮಿತಿ ಜಿಲ್ಲಾಧ್ಯಕ್ಷರಾಗಿ ಪಿ.ಬಿ.ವಿನಾಯಕ

ದಾವಣಗೆರೆ, ಮೇ 30- ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ ನಗರದ ಪಿ.ಬಿ.ವಿನಾಯಕ ನೇಮಕವಾಗಿದ್ದಾರೆ. ಸೇವಾ ಸಮಿತಿ ಸಂಸ್ಥಾಪಕ ರಾಜ್ಯಾಧ್ಯಕ್ಷ ವೇ. ಚನ್ನವೀರ ಸ್ವಾಮಿ ಹಿರೇಮಠ ಅವರು ಈ ನೇಮಕ ಮಾಡಿದ್ದಾರೆ.

ಹೃದಯಪೂರ್ವಕ ಕೃತಜ್ಞತೆಗಳು

ಶ್ರೀ ಜಿ.ಎಂ. ಗುಡ್ಡಪ್ಪ
ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಆದ ನಾನು, ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ದಿನಾಂಕ : 20.07.1983 ರಿಂದ 31.05.2023ರವರೆಗೆ ಒಟ್ಟು 39 ವರ್ಷ 10 ತಿಂಗಳು 15 ದಿನಗಳ ಸುದೀರ್ಘವಾಗಿ ಸೇವೆ ಸಲ್ಲಿಸಿ, ದಿನಾಂಕ : 31.05.2023ರಂದು ವಯೋನಿವೃತ್ತಿ ಆಗುತ್ತಿರುತ್ತೇನೆ. ನನ್ನ ಸೇವಾ ಅವಧಿಯಲ್ಲಿ ನನ್ನಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಏನಾದರೂ ಲೋಪದೋಷಗಳು ಕಂಡು ಬಂದಲ್ಲಿ ಕ್ಷಮಿಸಬೇಕೆಂದು ಕೋರುತ್ತಾ, ಕರ್ತವ್ಯಕ್ಕೆ ಸಹಾಯ ಮಾಡಿದ ಎಲ್ಲಾ ನನ್ನ ಅಧಿಕಾರಿಗಳು, ಸ್ನೇಹಿತರು, ಸಾರ್ವಜನಿಕರು, ರೈತರು ಹಾಗೂ ಹೊರಗುತ್ತಿಗೆ ನೌಕರರು ನನ್ನ ಹಿತೈಷಿಗಳಿಗೂ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಮತ್ತು ಇದೇ ರೀತಿ ಮುಂದೆಯೂ ಸಹ ನಿಮ್ಮಗಳ ಆಶೀರ್ವಾದವು ಇರಲೆಂದು ಬಯಸುತ್ತೇನೆ. ದಿನಾಂಕ : 31.05.2023ರ ಸಂಜೆ 5.30ಕ್ಕೆ ತ್ಯಾವಣಿಗೆ ಕಛೇರಿ ಸಿಬ್ಬಂದಿಗಳು ನನ್ನ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಿದ್ದು, ಸದರಿ ಬೀಳ್ಕೊಡುಗೆ ಸಮಾರಂಭಕ್ಕೆ ವಾಲ್ಮೀಕಿ ಸಮುದಾಯ ಭವನ ಚನ್ನಗಿರಿ ತಾಲ್ಲೂಕು, ತ್ಯಾವಣಿಗೆಯಲ್ಲಿ ಹಾಜರಾಗಿ ಕಾರ್ಯಕ್ರಮ ಯಶಸ್ವಿಗೊಳಿಸಲು ಕಛೇರಿ ಪರವಾಗಿ ಕೋರುತ್ತೇನೆ.
ಇಂತಿ ನಿಮ್ಮವ
ಶ್ರೀ ಜಿ.ಎಂ. ಗುಡ್ಡಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಕನೀನಿನಿ.ನಂ.-3 ಭದ್ರಾನಾಲಾ, ಉಪ ವಿಭಾಗ, ತ್ಯಾವಣಿಗೆ

ಹೃದಯಪೂರ್ವಕ ಅಭಿನಂದನೆಗಳು

ಕರ್ನಾಟಕ ನೂತನ ಸರ್ಕಾರದಲ್ಲಿ
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ
ಖಾತೆ ಸಚಿವರಾಗಿ ಮತ್ತು ದಾವಣಗೆರೆ
ಜಿಲ್ಲಾ ಉಸ್ತುವಾರಿ ಸಚಿವರಾಗಿರುವ
ಸುಂದರ ನಗರಿಯ ಕನಸುಗಾರ,
ದೂರದೃಷ್ಟಿಯ ನಾಯಕ, ಅಭಿವೃದ್ಧಿ ಚಿಂತಕ,
ಅಭಿವೃದ್ಧಿಯ ಹರಿಕಾರರೂ ಆದ
ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾಗಿ
ಚುನಾಯಿತಗೊಂಡಿರುವ ; ಭಾರತ ದೇಶದಲ್ಲೇ
ಅತ್ಯಂತ ಹಿರಿಯ ಶಾಸಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ
ಹಿರಿಯ ಮುತ್ಸದ್ದಿಗಳೂ, ದಾನಿಗಳೂ ಆಗಿರುವ
ಡಾ|| ಶಾಮನೂರು ಶಿವಶಂಕರಪ್ಪ
ಅವರಿಗೆ ಹೃದಯ ತುಂಬಿದ ಅಭಿನಂದನೆಗಳು.
ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಸದಸ್ಯರು
ಹಾಗೂ ದಾವಣಗೆರೆ ಜಿಲ್ಲಾ ಖಾಸಗಿ ಬಸ್ ಮಾಲೀಕರುಗಳು
ದಾವಣಗೆರೆ ಜಿಲ್ಲಾ ಖಾಸಗಿ
ಬಸ್ ಮಾಲೀಕರ ಸಂಘ (ರಿ.), ದಾವಣಗೆರೆ.